# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



Scan For Digital Colourful Hampi Times E-paper



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:245 • ನೋಂದಣಿ ನಂ.:KARKAN27911 • ವಿಜಯನಗರ • 23.02.2024 • ಶುಕ್ರವಾರ • ಪುಟ:04 • ಬೆಲೆ:2
Volume:01 • Issue:245 • Reg.No:KARKAN27911 • VIJAYANAGARA • 23.02.2024 • Friday • Page:04 • Rs:2


## ಒನಕೆ ಓಬವ್ವನ ತವರೂರು ಗುಡೇಕೋಟೆಯಲ್ಲಿ ಉತ್ಸವ

■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ವಿಜಯನಗರ ಜಿಲ್ಲಾಡಳಿತ ಇವರ ಸಹಯೋಗದಲ್ಲಿ ಗುಡೆಕೋಟೆ ಉತ್ಸವವು ಫೆಬ್ರವರಿ 24 ಮತ್ತು ಫೆ. 25 ರಂದು ನಡೆಯಲಿದೆ.



ಫೆ.24ರ ಸಂಜೆ 6 ಗಂಟೆಗೆ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಉದ್ಘಾಟಿಸುವರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್. ಕೆ. ಪಾಟೀಲ್, ಕಾರ್ಮಿಕ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವಾರದ ಸಂತೋಷ್ ಎಸ್. ಲಾಡ್, ಯುವ ಸಬಲೀಕರಣ, ಕ್ರೀಡಾ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವಾರಾದ ಬಿ. ನಾಗೇಂದ್ರ ಅವರು ಘನ ಉಪಸ್ಥಿತಿ ವಹಿಸುವರು. ಕೂಡ್ಲಿಗಿ ಶಾಸಕರಾದ ಡಾ. ಶ್ರೀನಿವಾಸ ಎನ್.ಟಿ ಅವರು ಅಧ್ಯಕ್ಷತೆ ವಹಿಸುವರು. ವಿಶೇಷ ಆಹ್ವಾನಿತರಾಗಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಮಾತಾ ಮಂಜಮ್ಮ ಜೋಗತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಡಾ ಎನ್. ಮಂಜುಳಾ, ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಡಾ.ಧರಣಿದೇವಿ ಮಾಲಗತ್ತಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್ ಸ್ಟೇರಿದಂಥೆ ಜಿಲ್ಲೆಯ ಜನಪ್ರತಿನಿಧಿಗಳು, ಅಧಿಕಾರಿಗಳು ಇತರರು ಪಾಲ್ಗೊಳ್ಳಲಿದ್ದಾರೆ.

## ಪೊಲೀಸರ ಸುಳ್ಳು ಕೇಸ್ ದಾಖಲು ವಿರೋಧಿಸಿ ವಕೀಲರು ಪ್ರತಿಭಟನೆ

### ಕಲಾಪದಿಂದ ದೂರ ಉಳಿದ ಹೊಸಪೇಟೆ ವಕೀಲರು

■ **ಹಂಪಿ ಟೈಮ್ಸ್ ಹೊಸಪೇಟೆ**

ವಕೀಲರ ವಿರುದ್ಧ ರಾಮನಗರ ಪೊಲೀಸರು ಸಲ್ಲಿಸಿದ ಸುಳ್ಳು ಕೇಸ್ ಹಿಂಪಡೆಯಲು ಮತ್ತು ಪಿ.ಎಸ್.ಐ. ವಿರುದ್ಧ ಕ್ರಮ ಜರುಗಿಸಲು ಒತ್ತಾಯಿಸಿ ಇಲ್ಲಿಯ ವಕೀಲರ ಸಂಘದವರು ಗುರುವಾರ ಪ್ರತಿಭಟನೆ ಮಾಡಿ, ಕಲಾಪದಿಂದ ದೂರ ಉಳಿದರು. ನ್ಯಾಯಾಲಯದ ಆವರಣದಿಂದ ಹೊರಟ ಪ್ರತಿಭಟನಾ ಮೆರವಣಿಗೆಯು ಪುನೀತ್ ರಾಜಕುಮಾರ ವೃತ್ತದಲ್ಲಿ ಸೇರಿ ರಾಮನಗರ ಪೊಲೀಸರ ವಿರುದ್ಧ ಘೋಷಣೆ ಕೂಗಿದರು. >>4

## ರೈಲಿಗೆ ಬೆಂಕಿ ಹಾಕ್ತಿನಿ ಎಂದವರ ಬಂಧನಕ್ಕೆ ವಿಎಚ್‌ಪಿ, ಬಜರಂಗದಳ ಕಾರ್ಯಕರ್ತರ ಆಗ್ರಹ

■ **ಹಂಪಿ ಟೈಮ್ಸ್ ಹೊಸಪೇಟೆ**

ಅಯೋಧ್ಯೆಯಿಂದ ಮೈಸೂರಿಗೆ ತೆರಳುತ್ತಿದ್ದ ರೈಲು ಹೊಸಪೇಟೆ ರೈಲ್ವೆ ನಿಲ್ದಾಣಕ್ಕೆ ಗುರುವಾರ ರಾತ್ರಿ 9 ಗಂಟೆ ಸುಮಾರಿಗೆ ಬಂದಿದೆ. ದಿಢೀರನೇ 2ನೇ ಬೋಗಿಯಲ್ಲಿ ಹತ್ತಿದ ಮೂವರು ಅಪರಿಚಿತ ವ್ಯಕ್ತಿಗಳು ರೈಲಿಗೆ ಬೆಂಕಿ ಹಾಕುತ್ತೇವೆ ಎಂದು ಹೆದರಿಸಿದ್ದಾರೆ. ಕೂಡಲೇ ಭೋಗಿಯಲ್ಲಿದ್ದ ಪ್ರಯಾಣಿಕರು ಆ ವ್ಯಕ್ತಿಗಳನ್ನು ರೈಲ್ವೆ ನಿಲ್ದಾಣದ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ. ಪೊಲೀಸರು ಆ ವ್ಯಕ್ತಿಗಳನ್ನ ವಶದಲ್ಲಿಟ್ಟುಕೊಳ್ಳುವಲ್ಲಿ ವಿಫಲರಾಗಿದ್ದರಿಂದ ಕೂಡಲೇ ರಾಮಭಕ್ತರು, ಸ್ಥಳೀಯ ವಿಎಚ್‌ಪಿ ಮತ್ತು ಬಜರಂಗದಳ ಕಾರ್ಯಕರ್ತರು ರೈಲ್ವೆ ನಿಲ್ದಾಣದಲ್ಲಿ ಕೆಲನಿಮಿಷ ಆಕ್ರೋಶ ವ್ಯಕ್ತಪಡಿಸಿ ಆರೋಪಿಗಳ ಬಂಧನಕ್ಕೆ ಆಗ್ರಹಿಸಿದರು.

ಪೊಲೀಸರಿಗೆ ವ್ಯಕ್ತಿಗಳನ್ನು ಒಪ್ಪಿಸಿದಾಗ್ಯೂ ಅವರನ್ನು ಬಿಟ್ಟಿರುವುದು ಖಂಡನೀಯ. ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಪ್ರಯಾಣಿಕರಾದ ಡಾ.ಯೋಗಿ ದೇವರಾಜ ಅವರು ಸೇರಿದಂತೆ ಇತರರು ಆಗ್ರಹಿಸಿದ್ದಾರೆ. ವ್ಯಕ್ತಿಗಳನ್ನು ಪತ್ತೆ ಹಚ್ಚುವುದಾಗಿ ಪೊಲೀಸರು ಭರವಸೆ ನೀಡಿದ್ದಾರೆ.

## ಚುನಾವಣಾ ಕರ್ತವ್ಯ ಅಚ್ಚುಕಟ್ಟಾಗಿ ನಿರ್ವಹಿಸಿ: ಡಿಸಿ ಪ್ರಶಾಂತ್ ಮಿಶ್ರಾ

■ **ಹಂಪಿ ಟೈಮ್ಸ್ ಬಳ್ಳಾರಿ**

ಬರುವ ಲೋಕಸಭಾ ಚುನಾವಣೆಯನ್ನು ಮುಕ್ತ ಮತ್ತು ಪಾರದರ್ಶಕವಾಗಿ ನಡೆಸಲು ಹಾಗೂ ಯಾವುದೇ ಲೋಪವಾಗದಂತೆ ಅಧಿಕಾರಿಗಳು ತಮಗೆ ವಹಿಸಿದ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಯಶಸ್ವಿ ಗೊಳಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಲೋಕಸಭಾ ಚುನಾವಣೆ ಸಂಬಂಧ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ವಿವಿಧ ನೋಡಲ್ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಲೋಕಸಭೆ ಮತ ಕ್ಷೇತ್ರವಾದ ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 8 ವಿಧಾನಸಭಾ ಕ್ಷೇತ್ರಗಳಿದ್ದು, ಅದರಲ್ಲಿ ಬಳ್ಳಾರಿ ಜಿಲ್ಲೆಯ 4 ಕ್ಷೇತ್ರ, ವಿಜಯನಗರ ಜಿಲ್ಲೆಯ 4 ಕ್ಷೇತ್ರ ಒಳಗೊಂಡಿದೆ. ಸಿರುಗುಪ್ಪ ಕ್ಷೇತ್ರ ಕೊಪ್ಪಳ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರಿದೆ. ಚುನಾವಣೆಯನ್ನು ಯಶಸ್ವಿಯಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಅಗತ್ಯ ಸಿದ್ಧತೆ ಈಗಿನಿಂದಲೇ ಮಾಡಿಕೊಳ್ಳಬೇಕು. ಚುನಾವಣಾ ಕಾರ್ಯವನ್ನು ತಂಡವಾಗಿ ಕಾರ್ಯ ನಿರ್ವಹಿಸಿ ಯಶಸ್ವಿಗೊಳಿಸಲು ಎಲ್ಲರ ಸಹಕಾರ ಬೇಕು ಎಂದರು.

ಈಗಾಗಲೇ ಚುನಾವಣಾ ಕಾರ್ಯಕ್ಕೆ ನೇಮಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ತರಬೇತಿ ನೀಡಿ ಸಜ್ಜುಗೊಳಿಸಬೇಕು ಎಂದು ಹೇಳಿದರು.

ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಗಳಂತೆ ಚುನಾವಣೆ ನಡೆಸಲು ಜಿಲ್ಲಾಡಳಿತವು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಪ್ರತಿ ನೋಡಲ್ ಅಧಿಕಾರಿ ತನ್ನ ವಿಭಾಗದ ಕಾರ್ಯ ಮತ್ತು ಜವಾಬ್ದಾರಿಗಳ ಕುರಿತು ತರಬೇತಿ ನೀಡಿ, ತನ್ನ ತಂಡವನ್ನು ಸುಸಜ್ಜಿತಗೊಳಿಸುವುದು ಅವರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಎಫ್‌ಎಸ್‌ಟಿ, ಎಸ್‌ಎಸ್‌ಟಿ ಹಾಗೂ ಇತರ ತಂಡಗಳ ಮಧ್ಯ ಪರಸ್ಪರ ಸಮನ್ವಯ, ಸಂವಹನ ಇರಬೇಕು. ಚುನಾವಣಾ ಕಾರ್ಯಗಳಲ್ಲಿ ಎಚ್ಚರಿಕೆ ವಹಿಸುವ ಮೂಲಕ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ನೋಡಿಕೊಳ್ಳಬೇಕು. ಪ್ರತಿಯೊಬ್ಬ ಅಧಿಕಾರಿಗಳು ತನಗೆ ನಿಯೋಜಿಸಿದ ಚುನಾವಣಾ ಕಾರ್ಯಗಳ ಬಗ್ಗೆ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಅರ್ಥೈಸಿಕೊಂಡು ಕರ್ತವ್ಯ ನಿರ್ವಹಿಸಬೇಕು ಎಂದು ಎಂದರು.

ಸ್ಟ್ರಾಂಗ್ ರೂಂಗಳ ಪರಿಶೀಲನೆ ಕೈಗೊಳ್ಳಬೇಕು. ಮಸ್ಟರಿಂಗ್ ಮತ್ತು ಡಿಮಸ್ಟರಿಂಗ್ ಕುರಿತು ತರಬೇತಿ ನೀಡಬೇಕು. ಮತ ಯಂತ್ರಗಳ ರ್‍ಯಾಂಡಮೈಜೇಷನ್ ಕೈಗೊಳ್ಳಲಾಗುವುದು. ಚುನಾವಣಾ ಮಾದರಿ ನೀತಿ ಜಾರಿಯಾದ ಕೂಡಲೇ ಎಲ್ಲ ತಂಡಗಳು ಕಾರ್ಯ ನಿರತವಾಗಲಿವೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜೀತ್ ಕುಮಾರ್ ಬಂಡಾರು ಅವರು ಮಾತನಾಡಿ, ಚುನಾವಣೆ ಸುಗಮವಾಗಿ ನಡೆಸಲು ನಿಯೋಜಿಸಿದ ಪೊಲೀಸ್ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುತ್ತಿದೆ. ಅಲ್ಲದೆ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ. ಜಿಲ್ಲೆಯ ಗಡಿಭಾಗಗಳಲ್ಲಿ >>4



## ವಚನ ಅರಿವು

### ಕೈಲಾಸ ಕೂಲಿಯೆ?

ಮಾಡಿ ನೀಡಿ ಹೋದೆನೆಂಬಾಗ ಕೈಲಾಸವೇನು
ಕೈಕೂಲಿಯೆ?
ಮುಂದೊಂದ ಕಲ್ಪಿಸದೆ, ಹಿಂದೊಂದ ಭಾವಿಸದೆ
ಸಲೆಸಂದಿದ್ದಾಗವೆ
ಮಾರಯ್ಯಪ್ರಿಯ ಅಮರೇಶ್ವರಲಿಂಗವಿದ್ದ ಠಾವೆ ಕೈಲಾಸ.
– ಆಯ್ದಕ್ಕಿ ಲಕ್ಕಮ್ಮ

ಮನುಷ್ಯ ಕೆಲಸ ಮಾಡಿದರೆ ಕೂಲಿ ಪಡೆಯುವುದು ಲೌಖಿಕ ಜೀವನದ ರೀತಿನೀತಿ. ಮನುಷ್ಯ ಸ್ವಾಭಾವಿಕವಾಗಿ ಬದುಕದೆ ದಾನ, ಧರ್ಮ, ಪೂಜೆ, ಪುನಸ್ಕಾರಗಳನ್ನು ಮಾಡುವುದು, ಲೋಕೋಪಯೋಗಿ ಕೆಲಸಗಳನ್ನು ಮಾಡಿ ತಾನು ಸಾಕಷ್ಟು ಪುಣ್ಯಗಳಿಸಿದ್ದೇನೆ ಅಥವಾ ಪುಣ್ಯ ಸಿಗುತ್ತದೆ ಎಂದು ನಂಬಿರುತ್ತಾನೆ. ಕೈಲಾಸ ನನಗೆ ದೊರೆಯುತ್ತದೆ ಅಥವಾ ಸಿಗಲಿ ಎಂಬ ಆಸೆಯಿಂದ ಸೇವೆ ಮಾಡು ವವರನ್ನು, ಕೈಲಾಸ ನೀನು ಮಾಡಿದ ಕೆಲಸಕ್ಕೆ ಸಿಗುವ ಕೂಲಿಯಲ್ಲ, ಮುಂದೆ ಪರಲೋಕದಲ್ಲಿ ಸುಖ ಸಿಗುತ್ತದೆ ಎಂಬ ಕಲ್ಪನೆಯನ್ನು ನಂಬುವುದು, ಹಿಂದಿನ ಜನ್ಮದ ಪಾಪಕ್ಕೆ ಪ್ರಾಯಶ್ಚಿತ್ತ ಎಂಬ ಸುಳ್ಳನ್ನು ನಂಬಿ ಸದ್ಗತಿಯ ಆಸೆಯಿಂದ ಒಳ್ಳೆಯ ಕಾರ್ಯಗಳನ್ನು ಮಾಡುವುದಲ್ಲವೆಂದು, ತನ್ನ ಪಾಲಿನ ಕಾಯಕವನ್ನು ಪ್ರಾಮಾಣಿಕವಾಗಿ ಮಾಡಿ ಸರ್ವರ ಹಿತಕ್ಕೆ ದಾಸೋಹದಲ್ಲಿ ತೊಡಗಿಕೊಂಡರೆ ಭಕ್ತನ ಕಾಯಕವೇ, ಕಾಯವೇ ಕೈಲಾಸವಾಗುತ್ತದೆ. ಆತ್ಮ–ಪರಮಾತ್ಮ ಒಂದೇ ಎಂಬ ಭಾವ ಮೂಡಿ ಅರಿವು ನೆಲೆಗೊಳ್ಳುತ್ತದೆ. ಪರಲೋಕ, ಇಹಲೋಕ ಇಲ್ಲೇ ಇದೆ ಎಂಬ ವಾಸ್ತವ ಪ್ರಜ್ಞೆ ಮೂಡುತ್ತದೆ ಎನ್ನುತ್ತಾಳೆ ಲಕ್ಕಮ್ಮ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬದುಕು ಬಸ್ಸಿದಂತೆ

ಒಮ್ಮೆ ಆಸೆ ಪಟ್ಟು ನಾವು ಸೇರುವ ಸ್ಥಳವನ್ನು ಮುಟ್ಟಬೇಕೆಂದು ಬಸ್ ಹತ್ತಿದರೆ ನಮ್ಮ ಸ್ಥಳ ಬರುವವರೆಗೂ ಅಲ್ಲಿ ಆಗುವ ಎಲ್ಲಾ ನೋವು ನಲಿವುಗಳನ್ನು ಅನುಭವಿಸುತ್ತಾ ಕಾಯಬೇಕು ಕೂರಬೇಕು ನೂಕು ನುಗ್ಗಲು ಇದ್ದರೂ ಸುಧಾರಿಸಿಕೊಂಡು ಜೋರು ಜೋರು ಕೂಗುತ್ತಾ ಇರಲೇಬೇಕು ಡ್ರೈವರ್ ದಾರಿ ತೋರಿಸುವವರು ಕಂಡೆಕ್ಟರ್ ಸಿಕ್ಕ ದಾರಿಯಲ್ಲಿ ಜನರನ್ನು ಹತ್ತಿಸುತ್ತಾ ಇಳಿಸುತ್ತಾ ಜೀವನ ಪ್ರತಿಯೊಬ್ಬರಿಗೂ ಒಂದು ಪಾಠ ಹೇಳಿದಂತೆ ಆಗುತ್ತದೆ ಅವರವರ stop ಬಂದಾಗ ಇಳಿದು ಹೋಗಬೇಕೆಂಬುದನ್ನು ತಿಳಿಸುತ್ತದೆ.ಇನ್ನು ಬಸ್ ಒಳಗಿನ ಒಂದೊಂದು ಸೀಟು ಒಂದೊಂದು ಕಥೆ ಹೇಳುತ್ತಾ ಸಾಗುತ್ತದೆ ನಿದ್ದೆಗೆ ಜಾರಿದವರು ಮೊಬೈಲ್ ಆಡುವರು ಚಾಟಿಂಗ್ ಮಾಡುವರು ತೊಕಡಿಸುತ್ತ ಬೇರೆಯವರ ಮೇಲೆ ಬೀಳುವುದು ಮತ್ತೆ ಕೆಲವರು ದುಡಿಯುಲು ಬೇರೆ ಊರಿಗೆ ಹೋದವರು ಇಡೀ ಕುಟುಂಬ ಸಮೇತ ಮಾತಾಡುತ್ತಾ ಕುಳಿತವರು ಹಾಡು ಕೇಳುವರು ಜೋರಾದ ಶಬ್ದಕ್ಕೆ ಕೋಪ ಮಾಡಿಕೊಂಡವರು ಇನ್ನು ಇವರು ಯಾರು ಇಲ್ಲದಂತೆ ತಮ್ಮ ಪ್ರೇಮಲೋಕದಲ್ಲಿರುವ ಹುಡುಗ ಹುಡುಗಿ ಹಾಗೂ ಮದುಮಕ್ಕಳು,ಕೆಲವರು ಮನೆಯಲ್ಲಿ ಇದ್ದಂತೆ ತಾವು ತಿಂದ ತಿಂಡಿಗಳ ಪೊಟ್ಟಣ ಪೇಪರ್ಗಳನ್ನು ಬಸೆಲ್ಲಾ ಗಲೀಜು ಮಾಡುವರು ಬ್ರೇಕ್ ಹಾಕಿದಾಗ ಒಬ್ಬರ ಮೇಲೆ ಬೀಳುವುದು ಅಪ್ಪ ಅಮ್ಮರ ಎದುರಿಸಿ ನಾವೇ ನಮ್ಮ ಇಚ್ಚೆ ನಮ್ಮ ಜೀವನ ಅನ್ನುವವರನ್ನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಯಾರಿಗೂ ಸಿಗದೇ ಇದ್ದು ಬಿಡೋಣ ಅನ್ನುವ ಇಂತಹ ಅನೇಕ ಅನುಕೂಲ ನಡುವೆಯೇ ನಮ್ಮ ಸ್ಥಳವನ್ನು ತಲುಪುತ್ತೆವೆ ಸುಧಾರಿಸಿಕೊಳ್ಳುತ್ತೇವೆ ಕೆಲವು ಸಲ ದುಡ್ಡು ಕೊಟ್ಟು ಪ್ರಯಾಣಿಸಿದರೆ ಕೆಲವು ವೇಳೆ ಜಿಡಿಜಜ ಯಾಗಿ ಹಾಗೆಯೇ ಇಂತಹ ಎಡರು ತೊಡರುಗಳನ್ನು ಸಹಿಸಿ ಗುರಿ ತಲುಪುತ್ತೇವೆ.

ನಮ್ಮ ಕಣ್ಣ ಮುಂದೆ ಇರುವ ಇಂತಹ ಘಟನೆಗಳನ್ನು ನೋಡಿ ಸಮಾಧಾನದಿಂದ ಬದುಕು ಸಾಗಿಸಬೇಕು ನಾವು ಆರಿಸಿಕೊಂಡಿರುವ ದಾರಿ ಸರಿಯಾಗಿದ್ದಾರೆ ಕಾಯಬೇಕು ಇಲ್ಲಿ ಎಲ್ಲರೂ ನಮ್ಮನಮ್ಮಗಳ ಸಂತೆ ಮಾಡಲು ಬಂದಿರುವವರು ಮುಗಿದ ಮೇಲೆ.... ಹೋಗುವರೇ ಎಲ್ಲಾ ಎಂದು ತಿಳಿದ ಮೇಲೆ ಸಮಾಧಾನದಿಂದ ಎದುರಿಸಿ ನಮ್ಮ ಗುರಿ ತಲುಪುವವರೆಗೂ ಕಾಯಬೇಕು ಅಲ್ಲವೇ..?ಬದುಕೆಂಬ ಬಸ್ನಲ್ಲಿ ಇವೆಲ್ಲಾ ಸಹಜ ಹಾಗೆ ಇದು ಜೀವನದ ಒಂದು ಝಲಕ್...

– ಜಿ ಆರ್ ಬಸವರಾಜೇಶ್ವರಿ
ಸರ್ಕಾರಿ ಪ್ರೌಢಶಾಲೆ, ಹಗರಿ ಗಜಾಪುರ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 9448633038

"ಭಾರತ ಹುಣ್ಣಿಮೆಯಂದು ಶ್ರೀ ಕ್ಷೇತ್ರ ಹುಲಿಗಿಯಲ್ಲಿ" ಭಕ್ತ ಜನ ಸಾಗರ। (ದಿನಾಂಕ 24–2–2024ರಂದು ಭಾರತ ಹುಣ್ಣಿಮೆಯಂದು ಶ್ರೀ ಕ್ಷೇತ್ರ ಹುಲಿಗಿಯಲ್ಲಿ ಲಕ್ಷಾಂತರ ಭಕ್ತರು ಸೇರುವ ನಿಮಿತ್ತ ಲೇಖನ)


# ಜನಪದರ ಜಗದಾಂಬೆ ಹುಲಿಗೆಮ್ಮ

## 12ನೇ ಶತಮಾನದ ಹೊಯ್ಸಳ ಮಾದರಿ ದೇವಾಲಯ। ದೇವಿಯ ಗುಡಿಯ ಒಳಗಡೆ ನಾಗಜೋಗಿ ಬಸವಜೋಗಿಯರ ಮೂರ್ತಿ ಶಿಲ್ಪಗಳಿವೆ

ಇಂದು ಜಗತ್ತಿಗೆ ಶಾಂತಿ ಬೇಕಾಗಿದೆ. ಶಾಂತಿ ಪ್ರಿಯರು ದೈವ, ದೇವರ ಮೊರೆ ಹೋಗುವುದುಂಟು. ದೇವಸ್ಥಾನಗಳು ಶಾಂತಿಯನ್ನು ನೀಡುವ ಭವ್ಯ ಕೇಂದ್ರಗಳಾಗಿವೆ. ಶಾಂತಿಯ ಜೊತೆಗೆ ನೀತಿಯುತ ಬದುಕಿಗೆ ದೇವರೇ ಮುಖ್ಯ. ಮುಖ್ಯವಾಗಿ ಎಲ್ಲರಿಗೂ ಪ್ರಕೃತಿಯೇ ದೇವರು. ಸೂರ್ಯ, ಚಂದ್ರ, ಗಾಳಿ, ನೀರು, ಬೆಂಕಿಯನ್ನೇ ಜನಪದರು ದೇವರೆಂದು ಭಾವಿಸಿ ಪೂಜಿಸುವುದುಂಟು. ಸೂರ್ಯ ಹುಟ್ಟುವಾಗ ನಮಸ್ಕರಿಸುವುದು, ನದಿ ಕಂಡಾಗ ಕೈ ಮುಗಿಯುವುದು, ಒಲೆ ಹುಚ್ಚುವಾಗ (ಬೆಂಕಿ) ನಮಿಸುವುದು, ಅಡಿಗೆ ಮಾಡಿದ ಅನ್ನವನ್ನು (ಒಂದು ಹಿಡಿ) ಒಲೆಗೆ ಹಾಕುವುದು ಜನಪದರಲ್ಲಿ ಕಂಡುಬರುವ ದೈವಾರಾಧನೆಗಳಾಗಿವೆ. ಧಾರ್ಮಿಕ ಪರಂಪರೆಯಲ್ಲಿ ನಂಬಿಕೆಯನ್ನು ಹೊಂದಿರುವ ಜನಪದರು ಹೆಣ್ಣು ದೇವತೆಗಳಗೆ ಮುಖ್ಯ ಸ್ಥಾನವನ್ನು ಕೊಟ್ಟಿದ್ದಾರೆ. ತಮ್ಮ ಇಷ್ಟಾರ್ಥವು ಸಿದ್ದಿಸಲಿ ಎಂದು ವ್ರತ ಆಚರಿಸುವ ಭಕ್ತವೃಂದವು ಅನೇಕ. ತಮ್ಮ ತಮ್ಮ ಪರಿಸರದಲ್ಲಿರುವ ದೇವರಲ್ಲಿ ಕೃತಜ್ಞತಾ ಭಕ್ತಿಯನ್ನು ಅರ್ಪಿಸುವ ಜನಪದರು ಕಲ್ಯಾಣ ಕರ್ನಾಟಕದ ಪ್ರಸಿದ್ಧದೇವತೆ ಹುಲಿಗೆಮ್ಮನಿಗೆ ಹೆಚ್ಚು ನಡೆದುಕೊಳ್ಳುವುದುಂಟು.

### ಶ್ರೀ ಕ್ಷೇತ್ರ ಹುಲಿಗಿ

ಹೊಸಪೇಟೆ ಮತ್ತು ಕೊಪ್ಪಳದ ಮಾರ್ಗ ಮಧ್ಯದಲ್ಲಿ ಬರುವ ಹೊಸಪೇಟೆಯಿಂದ ಸುಮಾರು 8 ಕಿ.ಮೀ. ದೂರದಲ್ಲಿರುವ ಮುನಿರಾಬಾದ್(ಹುಲಿಗಿ) ಗ್ರಾಮವು ಶ್ರೀ ಹುಲಿಗೆಮ್ಮ ದೇವಿಯ ಪ್ರಸಿದ್ಧ ಕ್ಷೇತ್ರ. ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಈ ದೇವತೆಯ ಭಕ್ತರು ಹೈದ್ರಾಬಾದ್ ಕರ್ನಾಟಕ ಭಾಗದ ತುಂಬಾ ನೆಲೆಸಿದ್ದಾರೆ. ಈಕೆಯ ಭಕ್ತರು ಹೆಚ್ಚಾಗಿ ಬಳ್ಳಾರಿ, ಕೊಪ್ಪಳ, ರಾಯಚೂರು, ಬಿಜಾಪುರ, ಗುಲಬರ್ಗಾ ಜಿಲ್ಲೆಗಳನ್ನೊಳಗೊಂಡಂತೆ ಆಂಧ್ರ ಪ್ರದೇಶದ ಆದವಾನಿ, ಅನಂತಪುರ ಈ ದೇವತೆಯ ಹಾಗೂ ಕರ್ನಾಟಕದ ನಾನಾ ಭಾಗಗಳಿಂದ ಸಹಸ್ರಾರು ಭಕ್ತರು, ಅದರಲ್ಲಿ ಬಡವರು, ಕಡುಬಡವರನ್ನೊಳಗೊಂಡಂತೆ ಎಲ್ಲ ಜಾತಿ ಜನಾಂಗದವರು ದೇವಿಯ ದರ್ಶನ ಪಡೆದು ಪುನೀತರಾಗುವುದುಂಟು. "ಭಾರತ ಹುಣ್ಣಿಮೆಯ" ದಿನ ಈ ದೇವಿಯ ದರ್ಶನ ಪಡೆಯಲು ಸುಮಾರು 1 ಲಕ್ಷಕ್ಕೂ ಅಧಿಕ ಭಕ್ತರು ಹುಲಿಗೆಮ್ಮ ದೇವಿಯ ಪುಣ್ಯ ಕ್ಷೇತ್ರದಲ್ಲಿ ಸೇರುತ್ತಾರೆ, ಸೇರಿರುತ್ತಾರೆ. ರಾತ್ರಿಯೆಲ್ಲ ದೇವಿಯ ಆರಾಧನೆಯಲ್ಲಿ ತೊಡಗಿರುತ್ತಾರೆ. ಉದಾ: ದಿಡ್ ನಮಸ್ಕಾರ, ನೈವೆದ್ಯಪೂಜೆ, ತಲೆಮುಂಡಿ, ಮಕ್ಕಳ ಜವಳಿ, ಗಂಗೆಪೂಜೆ, ದೇವಿಯ ಉಡಿ ತುಂಬಿಸುವಿಕೆ ಮತ್ತು ತಮ್ಮ ತಮ್ಮ ಕಷ್ಟ ಸುಖಗಳಿಗೆ, ರೋಗರುಜಿನಗಳಿಗೆ ಸಂಬಂಧಿಸಿದಂತೆ ದೇವತೆಯಲ್ಲಿ ಹರಕೆ ಮಾಡಿಕೊಳ್ಳುವುದುಂಟು. ಹೊಸದಾಗಿ ಮದುವೆಯಾದವರು ಈ ದೇವತೆಯ ಗೋಪುರದ ಕಳಸ ನೋಡಬೇಕೆಂಬ ಪದ್ಧತಿ ಇದೆ. ಅಲ್ಲದೇ ಹೊಸದಂಪತಿಗಳು ಮದುವೆ ಸಮಯದಲ್ಲಿ ತಲೆಗೆ ಧರಿಸಿದ ಬಾಸಿಂಗವನ್ನು ನದಿಯಲ್ಲಿ ಬಿಡಬೇಕೆಂಬ ಪ್ರತೀತಿಯೂ ಇದೆ. ಹಾಗಾಗಿ ಅಂದು ನದಿಯಲ್ಲಿ ಎಲ್ಲಿ ನೋಡಿದರಲ್ಲಿ ಬಾಸಿಂಗಗಳೇ ಕಂಡುಬರುತ್ತವೆ. ಭಾರತ ಹುಣ್ಣಿಮೆ ದಿನ ದೇವಿಯ ದರ್ಶನ ಪಡೆಯಲು ಬರುವ ಭಕ್ತಾದಿಗಳು ಹೋಳಿಗೆ, ಎಣ್ಣೆ ಹೋಳಿಗೆ, ಮೊಸರನ್ನ ಇತ್ಯಾದಿಯನ್ನೊಳಗೊಂಡ ಬುತ್ತಿಯನ್ನು ತಂದು ನದಿ ದಂಡೆಯಲ್ಲಿ ದೇವಿಗೆ ಎಡೆಯನ್ನು ಹಾಕುತ್ತಾರೆ.



ಪ್ರದಕ್ಷಿಣೆ



ಡಾ.ತಾರಿಹಳ್ಳಿ ಹನುಮಂತಪ್ಪ
ಪ್ರಾಧ್ಯಾಪಕರು, ಕನ್ನಡ ವಿ.ವಿ.ಹಂಪಿ
ಮೊ.9448989275
Scan For Digital Colourful
HAMPI TIMES E-paper

### ಜನಪದರ ಜಗದಾಂಬೆ ಹುಲಿಗೆಮ್ಮ

ಸಾವಿರಾರು ಜನರು ಸುಡುವ ಬಿಸಿಲಿನಲ್ಲಿ ಶ್ರೀ ಕ್ಷೇತ್ರ ಹುಲಿಗಿಯಲ್ಲಿ ಅಡುಗೆ ಮಾಡಿ ಹೋಳಿಗೆ, ಹುಗ್ಗಿ, ಕಡುಬು, ಅನ್ನ, ಸಾಂಬಾರು, ಬದನೆಕಾಯಿ ಪಲ್ಲೆ ಮಾಡಿ ಅಡ್ಲಿಗಿ ಪೂಜೆ ಮಾಡುತ್ತಾರೆ. ಹುಲಿಗೆಮ್ಮನಿಗೆ ಹೋಳಿಗೆ ಎಡೆ ಹಾಕಿ ತಮ್ಮ ಸಮರ್ಪಣ ಭಕ್ತಿಯನ್ನು ದೇವಿಗೆ ಅರ್ಪಿಸುತ್ತಾರೆ. ಭಾರತ ಹುಣ್ಣಿಮೆ ದಿನ ಹುಲಿಗೆಮ್ಮನಿಗೆ ಸಿಹಿ ಅಡುಗೆ ಎಡೆ ಹಾಕುವ ಉದ್ದೇಶವೇನೆಂದರೆ, ಜನಪದರ ಪ್ರಕಾರ "ಹುಲಿಗೆಮ್ಮ (ಸೌದತ್ತಿ ಎಲ್ಲಮ್ಮ) ತುಂಬು ಗರ್ಭಿಣಿ ಆಕೆಯ ಮಗ ಪರಶುರಾಮ ಆಕೆಯ ಹೊಟ್ಟೆಯಲ್ಲಿರುತ್ತಾನೆ". ಹಾಗಾಗಿ ಹುಲಿಗೆಮ್ಮನ ಭಕ್ತರು ಭಾರತ ಹುಣ್ಣಿಮೆಗಿಂತ ಒಂದು ತಿಂಗಳು ಮೊದಲೇ ತಮ್ಮ ಮನೆಗಳಲ್ಲಿ ಹೋಳಿಗೆ ಹುಗ್ಗಿ ಸಿಹಿ ಅಡುಗೆ ಮಾಡಲ್ಲ. ಪಲ್ಲೆಗಳನ್ನು, ಗುಗ್ಗರಿಗಳನ್ನು ತಿನ್ನಲ್ಲ. ಅಪ್ಪಳ, ಸೊಂಡಿಗೆ ಇತ್ಯಾದಿ ಪದಾರ್ಥಗಳನ್ನುಕರಿಯುವುದಿಲ್ಲ.ಕಾರಣವೇನೆಂದರೆ ಹುಲಿಗೆಮ್ಮ ಗರ್ಭಿಣಿ ಇರುವುದರಿಂದ ಆಕೆಗೆ ಎಡೆ ಹಾಕಿದ ನಂತರವೇ ತಮ್ಮ ತಮ್ಮ ಮನೆಗಳಲ್ಲಿ ಸಿಹಿ ಅಡುಗೆಯನ್ನು ಮಾಡುತ್ತಾರೆ. ಹುಲಿಗಿಯಲ್ಲಿ "ಅಡ್ಲಿಗಿ ಪೂಜೆ" ಮಾಡುವಾಗ ಹೋಳಿಗೆ, ಹುಗ್ಗಿ, ಕಡುಬು ಐದು ದಿನಸಿನ ಪಲ್ಲೆಗಳು, ಐದು ದಿನಸಿನ ತರಕಾರಿ, ಐದು ದಿನಸಿನ ಗುಗ್ಗರಿ, ಐದು ದಿನಸಿನ ಉಡಿ ಸಾಮಾನು, ಅಪ್ಪಳ, ಸಂಡಿಗೆ ಎಡೆಹಾಕಿ ನೈವೇದ್ಯ ಸಮರ್ಪಿಸಿದ ನಂತರ ಊಟ ಮಾಡುತ್ತಾರೆ. ಅಂದಿನಿಂದ ತಮ್ಮ ತಮ್ಮ ಮನೆಗಳಲ್ಲಿ ಸಿಹಿ ಅಡುಗೆಗಳನ್ನು ಮಾಡಿಕೊಂಡು ಊಟ ಮಾಡುತ್ತಾರೆ. ಅಂದು ನದಿ ದಂಡೆಯಲ್ಲಿ ಜೋಗುತಿಯರ ಅಡ್ಲಿಗಿ ಪೂಜೆ ವಿಜೃಂಭಣೆಯಿಂದ ನಡೆಯುತ್ತದೆ. ಹೈನುಗಾರಿಕೆಯನ್ನು ಹೊಂದಿರುವ ಭಕ್ತಾದಿಗಳು ತಮ್ಮ ಮನೆಯಲ್ಲಿ ಆಕಳು, ಎಮ್ಮೆ, ಕರು ಹಾಕಿದರೆ ಹಾಲು, ಗಿಣ್ಣ, ಮೊಸರು ಹಾಗೂ ತುಪ್ಪವನ್ನು ತಂದು ದೇವಿಗೆ ನೈವೇದ್ಯ ಅರ್ಪಿಸಿದ ನಂತರ ತಾವುಗಳು ಊಟ ಮಾಡುತ್ತಾರೆ. ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಯ ಕೆಲವು ಮನೆತನಗಳ ಮನೆ ದೇವರು ಕೂಡ ಹುಲಿಗೆಮ್ಮನೇ ಆಗಿದ್ದಾಳೆ. ಹಾಗಾಗಿ ಕೆಲವರಿಗೆ, ಹುಲುಗಪ್ಪ, ಹುಲಿಗೆಮ್ಮ, ಸಣ್ಣ ಹುಲಿಗೆಮ್ಮ, ದೊಡ್ಡ ಹುಲಿಗೆಮ್ಮ ಎಂಬಿತ್ಯಾದಿ ಹೆಸರುಗಳು ರೂಢಿಯಲ್ಲಿವೆ.

### ದೇವತೆಯ ಹಿನ್ನೆಲೆ

ಪಶ್ಚಿಮ ದಿಕ್ಕಿಗಿರುವ ಕಲಾತ್ಮಕವಾದ ಬಿಳಿಯ ಗೋಪುರವೇ ದೇವಾಲಯದ ಮಹಾದ್ವಾರ, ತುಂಗಭದ್ರಾ ನದಿ ದಡದಲ್ಲಿರುವ ಈ ಕ್ಷೇತ್ರಕ್ಕೆ ಶತಮಾನಗಳ ಚರಿತ್ರೆಯಿದೆ. ಹುಲಿಗಿ ಕ್ಷೇತ್ರದ ಈ ದೇವಾಲಯವು ಸುಮಾರು 12ನೇ ಶತಮಾನದ ಹೊಯ್ಸಳ ಮಾದರಿಯದ್ದಾಗಿದೆ. ಇದರ ಶಿಲಾಕಂಬ, ವಿನ್ಯಾಸಗಳು ವಿಜಯನಗರ ಕಾಲದ್ದು ಎನ್ನಲಾಗಿದೆ. ದೇವಾಲಯದ ಸಮೀಪದಲ್ಲಿರುವ ಸೋಮೇಶ್ವರ ದೇವಾಲಯದಲ್ಲಿರುವ ಶಿಲಾ ಲಿಪಿಯು ಈ ಮಾತಿಗೆ ಪುಷ್ಠಿ ನೀಡುತ್ತದೆ. "ನಮಸ್ತುಂಗ ಶಿರಶ್ಚುಂಬಿ ಛತ್ರ ಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಾಂಭವೇ" ಎಂದು ಇದರಲ್ಲಿದೆ. ವಿಜಯನಗರದ ಅರಸರು ಈ ಪ್ರದೇಶವನ್ನು ಸೋಮನಾಥಭಟ್ಟ ಎಂಭಾತನಿಗೆ ದತ್ತಿಯಾಗಿ ಕೊಟ್ಟಿರುವ ಬಗ್ಗೆಯೂ ಉಲ್ಲೇಖವಿದೆ. ಇಷ್ಟೆಲ್ಲ ಹಿನ್ನೆಲೆಯನ್ನು ಹೊಂದಿರುವ ಈ ದೇವಸ್ಥಾನದ ಗರ್ಭಗುಡಿಯಲ್ಲಿ ಹೆಣ್ಣು ದೇವತೆಯ ಮೂಲ ವಿಗ್ರಹವಿಲ್ಲ, ಅದು ಉದ್ಭವಗೊಂಡಿದೆಯೆನ್ನಲಾದ ದೊಡ್ಡಗಾತ್ರದ "ನರಸಿಂಹ ಸಾಲಿ ಗ್ರಾಮ"ವನ್ನೇ ಹುಲಿಗೆಮ್ಮದೇವಿಯೆಂದು ಆರಾಧಿಸಲಾಗುತ್ತಿದೆ. ಇಲ್ಲಿ ನಡೆಯುವುದು ದೇವಿಯ ಶಕ್ತಿಯ ಆರಾಧನೆಯಾಗಿದೆ. ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಶ್ರೀ ಹುಲಿಗೆಮ್ಮ ಈ ದೇವಿಯ ಗುಡಿಯ ಒಳಗಡೆ ನಾಗಜೋಗಿ ಬಸವಜೋಗಿಯರ ಮೂರ್ತಿ ಶಿಲ್ಪಗಳಿವೆ. ಈ ದೇವಿಯ ಪೂಜೆಯ ವಿಧಿ ವಿಧಾನಗಳೆಲ್ಲವೂ ಶೈವ ಸಂಪ್ರದಾಯದೆಂದು ಹೇಳಬಹುದಾಗಿದೆ. ಹುಲಿಗೆಮ್ಮ ಈ ದೇವಿ ಇರುವ ಬೆಳ್ಳಿಮಂಟಪ ಸುಮಾರು 40 ರಿಂದ 45 ವರ್ಷಗಳ ಹಿಂದೆ ಬಿಸರಳ್ಳಿ ದೇಸಾಯಿಯವರು ದಾನವಾಗಿ ಕೊಟ್ಟಿರುವಂಥದ್ದಾಗಿದೆ. ಹಾಗೆಯೇ ದೇವಸ್ಥಾನವನ್ನು ಒಂದು ಸುತ್ತ ಹಾಕಿದಾಗ ಮೂಲ ದೇವಸ್ಥಾನದ ಬಲಭಾಗದಲ್ಲಿ ಪರಶುರಾಮ ದೇವಾಲಯವಿದೆ. ಹುಲಿಗೆಮ್ಮ ದೇವಿಯ ಗುಡಿಯ ಎದುರಿಗೆಮಾತಂಗಿದೇವಾಲಯವಿದೆ.ಶ್ರೀದೇವಿಯ(ರೇಣುಕಾಂಬೆಯ) ನವರೂಪಗಳಲ್ಲಿ ಮಾತಂಗಿ ರೂಪವೂ ಒಂದು ಎಂಬ ನಂಬಿಕೆಯೂ, ಮಾತಂಗಿಯು ಶ್ರೀದೇವಿಯ ಸಚಿವೆ ಎಂದೂ ಆಕೆಯ ಎಲ್ಲ ಶಾಸ್ತ್ರಗಳಲ್ಲಿ ಪ್ರವೀಣೆ ಎಂಬ ನಂಬಿಕೆಯೂ ಕೂಡ ಉಂಟು. ತುಂಗಭದ್ರಾ ನದಿ ದಡದಲ್ಲಿ ಶ್ರೀ ಹುಲಿಗೆಮ್ಮ ದೇವಿಯ "ಪಾದಗಟ್ಟೆ" ಇದೆ. ಹುಲಿಗೆಮ್ಮ ಮೊದಲು ಹೊಸೂರಿನಲ್ಲಿ ವಾಸವಾದಳು. ನಂತರ ಹೊಸೂರನ್ನು ಬಿಟ್ಟು ಹುಲಿಗಿಗೆ ಬಂದು ವಾಸವಾದಳು ಎಂಬುದಕ್ಕೆ ಮೌಖಿಕ ಸಾಹಿತ್ಯದ ಜನಪದರ ಕಥೆ ಮತ್ತು ಐತಿಹ್ಯಗಳು ನಮಗೆ ಸ್ಪಷ್ಟೀಕರಣ ಕೊಡುತ್ತವೆ. ಹಾಗೆ ಹುಲಿಗೆಮ್ಮ ಹೊಸೂರಿನಿಂದ ಹುಲಿಗಿಗೆ ಬರುವಾಗ ಇಟ್ಟಂತಹ ಹೆಜ್ಜೆಗಳೇ ನದಿಯ ದಡದಲ್ಲಿರುವ "ಪಾದಗಟ್ಟೆ" ಎಂಬುದು ಜನಪದರ ನಂಬಿಕೆ. ಈಗಲೂ ತುಂಗಭದ್ರಾ ನದಿ ಪಕ್ಕದಲ್ಲಿ ಹೊಸೂರು ಎಂಬ ಪುಟ್ಟ ಗ್ರಾಮವಿದೆ. ಶ್ರೀಕ್ಷೇತ್ರ ಮಾತೆ ಹುಲಿಗೆಮ್ಮ ದೇವಿಯ ಮೇಲೆ ಮೂರು ದಿನಗಳವರೆಗೆ ಆಡುವ ಸೋಬಾನ ಪದಗಳು ಹೊಸಪೇಟೆಯ ಮ್ಯಾಸಕೇರಿ ಜನಪದರಲ್ಲಿವೆ. ಹಾಡುಗಳು ಈಗಲೂ ಹುಲಿಗೆಮ್ಮ ದೇವಿಯ ಮೇಲೆ ಕಥೆಗಳು, ಹಾಡುಗಳು ಕಾವ್ಯಗಳು ಜೋಗತಿಯರು ಮೂಲಕ ಜನಪ್ರಿಯತೆಯನ್ನು ಪಡೆದಿವೆ. ದುಷ್ಟಶಕ್ತಿಗಿಂತ ದೈವಶಕ್ತಿ ದೊಡ್ಡದು, ವರಕೊಟ್ಟ ದೇವರಿಗೆ (ಅಂದರೆ ಬಾಗಿ ನಮಸ್ಕಾರ ಮಾಡು. ಬಲಿಕೊಡು ಎಂಬಲ್ಲ) ಶಿರಕೊಡು. ದೈವ ಅಮರ, ಮುಡುಪಿಗೆ ಮೂವತ್ತು ವರ್ಷ, ಹರಕೆಗೆ ಅರವತ್ತು ವರ್ಷ ಇತ್ಯಾದಿ ನಾಣ್ಣುಡಿಗಳು ಹುಲಿಗೆಮ್ಮನ ಮೇಲೆ ನಿರ್ಮಿತವಾಗಿವೆ. ಒಟ್ಟಾರೆಯಾಗಿ ಲಕ್ಷಾಂತರ ಭಕ್ತಾದಿಗಳನ್ನು ಹೊಂದಿರುವ ಶ್ರೀ ಕ್ಷೇತ್ರಮಾತೆ ಹುಲಿಗೆಮ್ಮ ಹೈದ್ರಾಬಾದ್ ಕರ್ನಾಟಕ ಭಾಗದ ಜನರ ಆರಾಧ್ಯ ದೈವವಾಗಿದ್ದಾಳೆ. ಅದಕ್ಕೆ ಸಾಕ್ಷಿ ಎಂಬಂತೆ ಶ್ರೀ ಕ್ಷೇತ್ರ ಹುಲಿಗಿಯಲ್ಲಿ ಅರಿಶಿಣ, ಕುಂಕುಮದ ಜನಪ್ರಿಯತೆ ಜನರ ಮನದಲ್ಲಿ ಭಕ್ತಿಯ ಛಾಯೆಯನ್ನು ಮೂಡಿಸಿದೆ ಎಂಬುವುದರಲ್ಲಿ ಎರಡು ಮಾತಿಲ್ಲ. ಏನಂತೀರಿ?


# ಮರೆಯಾಗುತ್ತಿರುವ ಹಳ್ಳಿಕಟ್ಟೆ ಸಂಸ್ಕೃತಿ

## 'ಕಟ್ಟೆ'ಗೆ ನಾನಾ ಬಗೆಯ ರೂಪಗಳುಂಟು. ಅದಕ್ಕೆ ಆಯಾ ಅನ್ವರ್ಥ ಹೆಸರಿನಿಂದಲೇ ಕರೆಯುವುದು ವಾಡಿಕೆ ಊರರವರ ನ್ಯಾಯ ಪಂಚಾಯ್ತಿ, ಊರ ವಿಷಯ ಚರ್ಚಿಸಲು ಊರ ನಡುವಿನ, "ಆಲದ ಕಟ್ಟೆ"

ನಮ್ಮ ಮಧ್ಯ ಕರ್ನಾಟಕದಲ್ಲಿ, ಉತ್ತರ ಕರ್ನಾಟಕದಲ್ಲಿ ಹಲವು ಮನೆತನಗಳಿಗೆ, "ಭಾವಿಕಟ್ಟೆ ಮನೆತನ", "ಕಟ್ಟೆಮನೆ" ಮನೆಯವರು, ಹೀಗೆ ಕಟ್ಟೆಯೊಂದಿಗಿರುವ ಮನೆತನದ ಹೆಸರುಗಳಿರುವುದು ನಮಗೆ ತಿಳಿದೇ ಇದೆ. ಈ ರೀತಿಯ ಹೆಸರುಗಳು ಅನ್ವರ್ಥವಾಗಿ ರೂಢಿಗೆ ಬಂದು, ಕೊನೆಗೆ ಮನೆತನದ ಹೆಸರೇ ಆಗಿರುವುದು. ಪ್ರತಿ ಮನೆಯ ಅವಿನಾಭಾವವಾಗಿರುವ "ಕಟ್ಟೆ"ಗಳು, ಹಳ್ಳಿ ಮನೆಯ ಜೀವಾಳವೇ ಹೌದು. "ಕಟ್ಟೆಗಳು" ಇಲ್ಲದ ಮನೆಯನ್ನು ಊಹಿಸಲು ಅಸಾಧ್ಯ ಆಗಿದೆ.

ಬನ್ನಿ ನಮಗೆಲ್ಲಾ ತಿಳಿದೇ ಇರುವ ಕಟ್ಟೆ ಪುರಾಣವನ್ನು ಮತ್ತೊಮ್ಮೆ ನೆನಪಿನಿಂದ ಮೆಲುಕು ಹಾಕೋಣ.

'ಕಟ್ಟೆ', 'ಜಗುಲಿ', 'ಪೌಳಿ' ಹೀಗೆ ಕಟ್ಟೆಗಿರುವ ಹಲವು ಹೆಸರುಗಳು. 'ಕಟ್ಟೆ'ಗೆ ನಾನಾ ಬಗೆಯ ರೂಪಗಳುಂಟು. ಅದಕ್ಕೆ ಆಯಾ ಅನ್ವರ್ಥ ಹೆಸರಿನಿಂದಲೇ ಕರೆಯುವುದು ವಾಡಿಕೆ. ಇದಕ್ಕೆ ಪೌಳಿ/ಪೋಳಿ' ಅಂತಲೂ ಕರೆಯುವರು. ಆಡು ಮಾತಿನಲ್ಲಿ 'ಪೋಳಿಕಟ್ಟೆ'. ದೇವಸ್ಥಾನದ ಸುತ್ತಲೂ ಇತ್ತೀಚಿನ ಕಾಪೌಂಡ್ ನಂತೆ, ಆಗ ಸುತ್ತಲೂ ಕಲ್ಲಿನ ಕಟ್ಟೆಯನ್ನೇ ನಿರ್ಮಿಸುತ್ತಿದ್ದರು. ಕಾರಣ, ದೇವಾಲಯಗಳ ಉತ್ಸವಗಳನ್ನು ಊರ ಜನರು ಸುಲಭವಾಗಿ ವೀಕ್ಷಿಸಲು ಅನುಕೂಲವಾಗಲು. ಅದಕ್ಕೆ "ಪೌಳಿ/ಪೋಳಿ" ಎಂತಲೂ ಕರೆಯುವರು. ನಮ್ಮೂರಿನ ಹನುಮಪ್ಪ ದೇವಸ್ಥಾನದ ಕಟ್ಟೆಗೆ "ಪೋಳಿಕಟ್ಟೆ"ಎಂತಲೇ ಕರೆಯುವೆವು. ಮನೆಯ ಮುಂದಿದ್ದರೆ ಅದು ಕಟ್ಟೆ, ಜಗುಲಿ ಎಂತಲೂ ಕರೆದರೆ, ಬನ್ನಿ ಮರದ ಸುತ್ತಲು ಕಟ್ಟಿದ್ದರೆ ಅದುವೇ "ಬನ್ನಿಕಟ್ಟೆ," ಬಾವಿಗಾದರೆ "ಬಾವಿ ಕಟ್ಟೆ". ಬಿಲ್ವ ಪತ್ರಿ ಮರದ ಸುತ್ತಲಿದ್ದರೆ, "ಪತ್ರಿ ಕಟ್ಟೆ". ತುಳಸಿಗಾದರೆ 'ತುಳಸಿ ಕಟ್ಟೆ'. ಮನೆಯ ದೇವರ ಕೋಣೆಯಲ್ಲಿರುವುದು, 'ದೇವರ ಕಟ್ಟೆ'ಯಲ್ಲ, ಅದು "ದೇವರ ಜಗುಲಿ"ಯಾಗುತ್ತಿತ್ತು. ಜೊತೆಗೆ ನಾವು ನೋಡಿರಬಹುದು, ಬಸವಣ್ಣ, ಆಂಜನೇಯ, ದೇವಿ ದೇವಸ್ಥಾನಗಳಿಗೆ, ದೀಪಸ್ಥಂಭ, ಧ್ವಜ ಸ್ಥಂಭ ಆದ ನಂತರ, ಹೊರ ಆವರಣದಿಂದ ಸ್ವಲ್ಪ ದೂರದಲ್ಲಿ, " ಪಾದಗಟ್ಟೆ"(ಪಾದಗಳ+ ಕಟ್ಟೆ)ಗಳಿರುವುದು ಕಾಣುತ್ತೇವೆ. ಅಂದರೆ






ಅದರ ಅರ್ಥ, ದೇವರ ಪಾದಗಳು ಅಲ್ಲಿವೆ ಎಂದರ್ಥವಾದರೆ, ಇನ್ನೊಂದು, ಆಯಾ ದೇವರ ರಥೋತ್ಸವದ ಸಮಯದಲ್ಲಿ ತೇರನ್ನು ಅಲ್ಲಿಯವರೆಗೂ ಎಳೆದು, ಪಾದಗಟ್ಟೆಗೆ ಪೂಜಿಸಿ, ಮತ್ತೆ ತೇರನ್ನು ವಾಪಾಸು ದೇವಸ್ಥಾನದ ಹತ್ತಿರ ಎಳೆಯುವುದಾಗಿದೆ. ಊರರವರ ನ್ಯಾಯ ಪಂಚಾಯ್ತಿ, ಊರಿನವರು ಲೋಕಾಭಿರಾಮವಾಗಿ ಮಾತನಾಡಲು, ಏನಾದರೂ ಮುಖ್ಯವಾದ ಊರ ವಿಷಯ ಚರ್ಚಿಸಲು ಊರ ನಡುವಿನ, "ಆಲದ ಕಟ್ಟೆ" ಯಾಗಿರಬಹುದು, "ಅರಳಿಕಟ್ಟೆ" ಆಗಿರಬಹುದು, ಇವೇ ಊರಿನ ಚರ್ಚೆಗೆ ಸೂಕ್ತ ಜಾಗವಾಗಿರುವುದು. ಹೀಗೆ ಕಟ್ಟೆಗಿರುವ ವಿವಿಧ ರೂಪದ ಹೆಸರುಗಳಿಂದ, ಅದಕ್ಕೆ ಸಂಬಂಧಿಸಿದಂತಹ ಕಟ್ಟೆ ಕಣ್ಮುಂದೆ ಬರುವುದು.

ಮನೆಗೆ ಮುಂದಿರುವ ಕಟ್ಟೆ, ಮನೆಗೆ ಶೋಭೆಯನ್ನೆ ಕೊಡುವುದು. ಕಟ್ಟೆಯ ಒಂದೆಡೆ ಇರುವ ಬೀಸೋಕಲ್ಲು, ಜೊತೆಗೆ ಒರಳುಕಲ್ಲು ಮನೆಗೆ ದೈವೀಕ ಕಳೆಯನ್ನೇ ಕೊಡುವುದು. ಅಷ್ಟೇ ಅಲ್ಲ ಕಟ್ಟೆ ಪುರಾಣ, ಧಾನ್ಯ ಹಸನು ಮಾಡಲು, ನೆರಳಲ್ಲಿ ಒಣಗಿ ಹಾಕುವುದಿದ್ದರೆ ಮನೆಯ ಕಟ್ಟೆ ಸರಿಯಾಗುತ್ತಿತ್ತು. ನೆಲ್ಲು & ಧಾನ್ಯದ ಚೀಲ ಪೇರಿಸಿಡಲು, ತೆಂಗಿನಕಾಯಿಗಳನ್ನು ಒಂದೆಡೆ ಸಂಗ್ರಹಿಸಿಲು, ಮಳೆಗಾಲದಲ್ಲಿ ಬಟ್ಟೆ ಒಣಗಿ ಹಾಕಲು, ಒಣಗಿದ ಬಟ್ಟೆಗಳನ್ನು, ಒಂದೆಡೆ ಕಟ್ಟಿದ ಹಗ್ಗದಲ್ಲಿ ಹಾಕುವ ಸ್ಟೋರ್ ರೂಮ್ ಸಹ ಹೌದು. ಅಷ್ಟೇ ಅಲ್ಲ ಮಕ್ಕಳನ್ನು ಆಡಿಸಲು, ಮಕ್ಕಳು ಆಡಲು ಓದಲು–ಬರೆಯಲು ಅನುಕೂಲ ಒದಗಿಸುತ್ತಿತ್ತು. ಕೆಲಸಗಾರರೊಂದಿಗೆ ಮಾತನಾಡಲು, ಅವರ ಕೆಲಸದ ಲೆಕ್ಕಗಳೆಲ್ಲವೂ ಕಟ್ಟೆಯಲ್ಲೇ ನಡೆಯುತ್ತಿದ್ದವು. ಮನೆಗೆ ಬಂದ ಅತಿಥಿಗಳು ಅಭ್ಯಾಗತರು ಊಟದ ನಂತರದ ಮಾತುಕಥೆಗೆ ಮನೆಗೆ ಅಂಟಿಕೊಂಡ ಹೊರಭಾಗದ ಕಟ್ಟೆ ಅನುಕೂಲವಾಗಿತ್ತು. ಹಿರಿಯರು ಗಾಳಿಗೆ ಬಂದು, ಕಟ್ಟೆಯ ಮೇಲಿನ ಕಂಬಕ್ಕೊರಗಿ, ಮಾತಾನಾಡಲು, ಪಟ್ಟಾಂಗ ಹೊಡೆಯಲು, ಎಲೆ ಅಡಿಕೆ ಹಾಕಿಕೊಂಡು ವಿರಮಿಸಲು, ಮಗುವನ್ನು ಜೋಲಿ ಕಟ್ಟಿ ಮಲಗಿಸಲು, ಹೆಣ್ಣುಮಕ್ಕಳಿಗೆ ತಲೆ ಬಾಚಲು, ಬೇಸಿಗೆಯಲ್ಲಿ ಮನೆಮಂದಿ ವಿರಮಿಸಲು ಸೂಕ್ತ ಜಾಗವಾಗವೇ ಮನೆಯ ಕಟ್ಟೆಯಾಗಿತ್ತು. ಜೊತೆಗೆ ಕಟ್ಟೆ ಕೆಳಗಿದ್ದ "ಹಗೆವು" ಹಳೆಯ ಕಾಲದ, ಧಾನ್ಯದ ಸ್ಟೋರೇಜ್ ಆಗಿತ್ತು. ಆದರೆ ಇತ್ತೀಚೆಗೆ ಮನೆಗೆ ಕಟ್ಟೆಗಳು ಕಡಿಮೆಯಾಗುತ್ತಾ,'ಹಗೇವು' ಮಾಯವಾಗುತ್ತಾ ಬಂದಿದೆ. ಮರೆಯಾಗುತ್ತಿದೆ ಎಂದರೂ ತಪ್ಪಿಲ್ಲ. ಆಧುನಿಕ ಮನೆಗಳಲ್ಲಿ, ಬಹುಪಯೋಗಿ ಹಳೆಯ ದೊಡ್ಡ"ಕಟ್ಟೆ" ಈಗ, ಬೀಸೋಕಲ್ಲು, ಒರಳುಕಲ್ಲು ಇಲ್ಲದೇ, "ಸಿಟೌಟ್" ಹೆಸರಿನಿಂದ ಹೊಸ ರೂಪ ಪಡೆದು ಚಿಕ್ಕದಾಗಿದೆ. ಮನೆ ಮುಂದಿನ ಕಟ್ಟೆಯಲ್ಲಿ ನಡೆಯುತ್ತಿದ್ದ ಹಲವು ಜೀವಂತಿಕೆಯೂ ಮರೆಯಾಗಿ, ಮರೆಯಾಗುತ್ತಿರುವ ಕಟ್ಟೆಗಳೆಲ್ಲಾ ಖಾಲಿ ಖಾಲಿಯಾಗಿವೆ.

– ಲೀಲಾವತಿ ಶಿವನಗೌಡ್ರು.
ಹ.ಬೊ.ಹಳ್ಳಿ.

**ಕವಿ ಮನಸು**

## ರುಚಿಕರ ಪಡುವಲ



ಕಡ್ಡಿಯಂಥ ಬಳ್ಳಿಯಲ್ಲಿ
ಅಗಲದೆಲೆಯು ಹಲವಿದೆ
ನಡುವಿನಲ್ಲಿ ಖಾದ್ಯಕಾಗಿ
ಕಾಯಿಯೊಂದು ಬಿಟ್ಟಿದೆ

ಬಳ್ಳಿಯಲ್ಲಿ ಹಾವಿನಂತೆ
ಭೂಮಿ ತನಕ ಇಳಿಯದೆ
ಸುತ್ತ ಸುತ್ತ ಸುತ್ತಿಕೊಂಡು
ಸುರುಳಿಯಾಗಿ ನಿಂತಿದೆ

ಅಟ್ಟಿ ಇರಿಸಿದಂತೆ ಹೇಗೆ
ಬೆಳೆದು ಬಂತು ಗಿಡದಲಿ
ಇದನು ನೋಡಿ ಮನದಿ ಬಂತು
ರುಚಿಯ ತಿನಿಸು ಚಕ್ಕುಲಿ

ಹಲವು ಸತ್ವ ಒಳಗೆ ಅವಿತ
ದಿವ್ಯ ಕಾಯಿ ಪಡುವಲ
ಒಂದು ಬಾರಿ ತಿಂದರದನು
ಮರೆಯದಂಥ ರುಚಿಕರ॥

**– ಪೆರ್ಮುಖ ಸುಬ್ರಹ್ಮಣ್ಯ ಭಟ್**

## ವಿಶ್ವ ಚಿಂತನಾ ದಿನ



ಈ ಜಗದಲ್ಲಿ ಸಾಧಿಸುವ ನಿನ್ನ ಕನಸು ಆಗಲಿ ನಿರಂತರ.
ಗೆದ್ದೇ ಗೆಲುವೇ ಎಂಬ ಸಕಾರಾತ್ಮಕ ಚಿಂತನೆ ಆಗಲಿ ಸುಸ್ಥಿರ.
ಸಣ್ಣ ಸಣ್ಣ ಪ್ರಯತ್ನದ ಫಲ ಕಾದು ನೋಡು ಕಾಲಾಂತರ.
ಸೃಷ್ಟಿಸುವುದು ಹೊಸ ಇತಿಹಾಸದ ಮನ್ವಂತರ.

**– ಮಂಜುಶ್ರೀ ಮುರಳೀಧರ್.
ತೋರಣಗಲ್ಲು, ಬಳ್ಳಾರಿ.**

# ಕರಿಮಣಿ ಮಾಲೀಕ ನೀನಲ್ಲ....

## ಒಂದು ರೀಲ್‌ನ ಸುತ್ತ ರಿಯಲ್ ಬದುಕು

ಕಳೆದ 20–30 ದಿನಗಳಲ್ಲಿ ಯಾರದ್ದೇ ಇನ್ಸಟಾಗ್ರಾಮ್ ಸ್ಟೋರಿ, ವಾಟ್ಸಾಪ್ ಸ್ಟೇಟಸ್ಗಳಲ್ಲಿ ಕಂಡು ಬರುತ್ತಿರುವ "ಏನಿಲ್ಲ ಏನಿಲ್ಲ ಕರಿಮಣಿ ಮಾಲೀಕ ನೀ ನಲ್ಲ" ಎಂಬ ಹಾಡನ್ನು 'ಜನಮರುಳೋ ಜಾತ್ರೆ ಮರುಳೋ' ಎನ್ನುವಂತೆ ಎಲ್ಲ ಹದಿಹರೆಯದವರಿಂದ ಹಿಡಿದು ಮಧ್ಯವಯಸ್ಸಿನವರೆಗಿನ ಹೆಣ್ಣು, ಗಂಡು ಮಕ್ಕಳು ತಮ್ಮದೇ ಅಭಿನಯದಲ್ಲಿ ರೀಲ್ ಗಳನ್ನು ಸುತ್ತಿ ಸಾಮಾಜಿಕ ಜಾಲತಾಣಗಳಿಗೆ ಹರಿಬಿಡುತ್ತಿದ್ದಾರೆ. ಹಾಗಾದರೆ ಈ ರೀಲ್ ನ ಹಿಂದೆ ಏನಿದೆ, ಏನಿಲ್ಲ ಎಂಬುದರ ಕುರಿತು ಒಂದು ಅವಗಾಹನೆ.

ಇಂದಿನ ವಿಜಯನಗರ ಜಿಲ್ಲೆಯ ಕೊಟ್ಟೂರಿನ ಬಳಿಯ ಕನಕ ಎಂಬ ಯುವಕ ಇನ್ಸ್ಟಾಗ್ರಾಮ್ ನಲ್ಲಿ ಭಗ್ನ ಸ್ನೇಹಿತನೊಬ್ಬನ ಪ್ರೇಮಕಥನದ ಕುರಿತು ಒಂದು ರೀಲ್ ಮಾಡಿ ಅದನ್ನು ಇನ್ಸ್ಟಾಗ್ರಾಮ್ ನಲ್ಲಿ ಪೋಸ್ಟ್ ಮಾಡಿದನು. ಅದರಲ್ಲಿ ಆತ ಹೇಳಿದ್ದು ಇಷ್ಟು "ತಾನಾಗೆ ಬಂದಳು ತಾನಾಗೆ ಹೋದ್ಲು, ಆದ್ರೆ ಹೋಗುವಾಗ ಒಂದ್ ಮಾತು ಹೇಳಿ ಹೋದ್ಲು.... ಏನಿಲ್ಲ ಏನಿಲ್ಲ ನಿನ್ನ ನನ್ನ ನಡುವೆ ಎಂದು ಹೇಳುತ್ತಿರುವಾಗಲೇ ಉಪೇಂದ್ರ ಚಿತ್ರದ ಏನಿಲ್ಲ ಏನಿಲ್ಲ ಚಲನಚಿತ್ರದ ಗೀತೆ ಪ್ರಸಾರವಾಗುತ್ತದೆ.

**ಸಂಭ್ರಮ ಮತ್ತು ನೋವುಗಳು ಹಗ್ಗದ ಮೇಲಿನ ನಡಿಗೆಯಂತೆ, ಕೊಂಚ ಜಾರಿದರೂ ಪೆಟ್ಟು ತಿನ್ನುವವರು ನಾವೇ.... ಆದ್ದರಿಂದ ಜಾಗರೂಕತೆ ವಹಿಸುವುದು ಒಳ್ಳೆಯದು. ಬದುಕಿನಲ್ಲಿ ರೀಲ್ಗಳಿರಬೇಕು ಹೊರತು ರೀಲ್ಗಳಲ್ಲಿ ಬದುಕು ಇಲ್ಲ ಎಂಬುದನ್ನು ಅರಿತಿರಬೇಕು, ಬದುಕಿನ ರೀಲ್ಗಳಲ್ಲಿ ರಿಯಾಲಿಟಿಯ ಅರಿವಿರಬೇಕು.**

ಈ ರೀಲ್ ಮಾಡಿದ ಯುವಕ ಕನಕ ಹೇಳುವ ಪ್ರಕಾರ ಆತನಿಗೆ ಕನಿಷ್ಠ ಐದಾರು ಲಕ್ಷ ಜನ ಇದನ್ನು ಲೈಕ್ ಮಾಡಬಹುದು ಎಂಬ ಅಂದಾಜಿತ್ತು. ಆದರೆ ಕೇವಲ ಎರಡು ದಿನಗಳಲ್ಲಿ ಸುಮಾರು ಮೂರು ಲಕ್ಷಕ್ಕೂ ಹೆಚ್ಚು ಜನ ಮುಂದಿನ 10 ದಿನಗಳಲ್ಲಿ ಮಿಲಿಯಗಟ್ಟಲೆ ಲೈಕ್ ದೊರೆತವು. ನಂತರ ಈ ಹಾಡು ಟ್ರೆಂಡ್ನಲ್ಲಿ ಬಂದು ಸಾಕಷ್ಟು ಜನ ಈ ರೀಲ್ ಗೆ ತಮ್ಮ ಆಂಗಿಕ ಅಭಿನಯವನ್ನು ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟರು.ಇದೀಗ ಎಲ್ಲೆಡೆ ಈ ಹಾಡಿನದ್ದೇ ಹಾವಳಿ. ಮುಂದೆ ಮತ್ತೊಂದು ಹಾಡು ಬರುವವರೆಗೆ ಈ ಹಾಡಿನದ್ದೇ ಕಾರು ಬಾರು.

ಸುಮಾರು 25 ವರ್ಷಗಳ ಹಿಂದೆ 1999 ರಲ್ಲಿ ಬಿಡುಗಡೆಯಾದ ಉಪೇಂದ್ರ ಚಲನಚಿತ್ರದ ಈ ಗೀತೆ ರಚಿಸಿದವರು ಖ್ಯಾತ ನಟ ಉಪೇಂದ್ರ, ಇದಕ್ಕೆ ಸಂಗೀತ ಸಂಯೋಜನೆ ಮಾಡಿದ್ದು ಗುರುಕಿರಣ್. ಆಗ ಈ ಹಾಡನ್ನು ಅಷ್ಟಾಗಿ ಕೇಳದ ಜನ ಇದೀಗ ಹುಚ್ಚೆದ್ದು ಈ ಹಾಡಿನ ಹಿಂದೆ ಬಿದ್ದಿದ್ದಾರೆ.

ಈ ಕುರಿತು ಹಾಡಿಗೆ ಸಂಗೀತ ನೀಡಿದ ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್ ಅವರನ್ನು ವರದಿಗಾರರು ಭೇಟಿಯಾದಾಗ ಅವರು ಸ್ಪಷ್ಟಪಡಿಸಿದ್ದು ಹೀಗೆ.... ಆ ದಿನಗಳಲ್ಲಿ ಕನ್ನಡ ಚಲನಚಿತ್ರರಂಗದ ಖ್ಯಾತ ನಟಿ ಪ್ರೇಮ ಮತ್ತು ಉಪೇಂದ್ರ ಅವರ ನಡುವೆ ಪ್ರೀತಿ ಇದೆ ಎಂಬಂತಹ ಗಾಳಿ ಸುದ್ದಿ ಎಲ್ಲೆಡೆ ಹಬ್ಬಿತ್ತು. ಈ ರೀತಿಯ ಗಾಳಿ ಸುದ್ದಿಗಳು ಬಣ್ಣದ ಲೋಕದಲ್ಲಿ ಸಾಮಾನ್ಯ. ಉಪೇಂದ್ರ ಅವರು ತಮ್ಮ ಮುಂದಿನ ಉಪೇಂದ್ರ ಚಲನಚಿತ್ರಕ್ಕೆ ಉಳಿದ ಇಬ್ಬರು ನಾಯಕಿ ನಟಿಯರ ಜೊತೆಗೆ ಪ್ರೇಮ ಅವರನ್ನು ಕೂಡ ನಾಯಕಿಯನ್ನಾಗಿ ಆರಿಸಿದರು.

ಈ ಚಿತ್ರದಲ್ಲಿ ಪ್ರೇಮಾ.. ಸ್ವಾತಿ ಎಂಬ ಹೆಸರಿನ ವ್ಯಕ್ತಿಯಾಗಿದ್ದು ಸಮಾಜದ ಕಾಮದ ಕೆಂಗಣ್ಣಿಗೆ ಗುರಿಯಾಗದಂತಿರಲು ತನಗೆ ಕರಿಮಣಿ ಸರದ ಅವಶ್ಯಕತೆ ಇದೆ, ಆದ್ದರಿಂದ ಲೋಕದ ಕಣ್ಣಿಗೆ ಆ ಕರಿಮಣಿ ಕಟ್ಟಿದ ಗಂಡು ನೀನಾಗಿ ಇರಬೇಕು ಎಂದು ನಾಯಕ ನಟನೊಂದಿಗೆ ಒಪ್ಪಂದಕ್ಕೆ ಬಂದಿರುತ್ತಾಳೆ. ಮುಂದೆ ನಾಯಕ ಕೀರ್ತಿ ಎಂಬ ಇನ್ನೊಬ್ಬ ವ್ಯಕ್ತಿಯನ್ನು ಪ್ರೀತಿಸಲಾರಂಭಿಸಿದಾಗ ಆಕೆಗೆ ತಾನು ಕೂಡ ನಾಯಕನನ್ನು ಪ್ರೀತಿಸುತ್ತಿರುವ ಅನುಭವ ವೇದ್ಯವಾಗುತ್ತದೆ. ಈ ಚಿತ್ರದಲ್ಲಿ ಬರುವ ಗೀತೆ ಏನಿಲ್ಲ ಏನಿಲ್ಲ ನಿನ್ನ ನನ್ನ ನಡುವೆ ಏನಿಲ್ಲ ಕರಿಮಣಿ ಮಾಲೀಕ ನೀ ನಲ್ಲ... ಎಂಬುದು ಆ ಸಂದರ್ಭದಲ್ಲಿ ಸೂಕ್ತವಾದ ಹಾಡಾಗಿದ್ದು ಅವರಿಬ್ಬರ ಮಧ್ಯದಲ್ಲಿ ಏನೂ ಇಲ್ಲ, ಏನೇನು ಇಲ್ಲ ಆಕೆಯ ಕೊರಳಲ್ಲಿರುವ ಕರಿಮಣಿಯ ಮಾಲೀಕ ಅವನಲ್ಲ ಎಂಬ ಸೂಚ್ಯಾರ್ಥವನ್ನು ಹೊಂದಿದೆ. ಅದರ ಜೊತೆಗೆ ತಮ್ಮಿಬ್ಬರ ನಡುವೆ ಏನು ಇಲ್ಲದ ಆದರೆ ಎಲ್ಲವೂ ಆಗಿರುವ ಸಂಬಂಧ ಒಂದು ಒಡ ಮೂಡುತ್ತಿದೆ



ಎಂಬ ಅರ್ಥವೂ ಕೂಡ ಇದೆ. ಹೀಗೆ ಈ ಹಾಡಿಗೆ ಎರಡೆರಡು ಅರ್ಥಗಳು ಇದ್ದು ಕರಿಮಣಿ ಮಾಲೀಕ ನೀನಲ್ಲ ಎಂಬುದು ಕರಿಮಣಿ ಮಾಲೀಕ ನೀ ನಲ್ಲ (ನೀನೇ ನಲ್ಲ)... ಎಂದು ಕೂಡ ಭಾಸವಾಗುವಂತಹ ಹಾಡು ಇದು.

ಆದರೆ ಕೆಲವೇ ದಿನಗಳ ಹಿಂದೆ ಈ ರೀಲ್ ಟ್ರೆಂಡಿಂಗ್ ನಲ್ಲಿ ಕಂಡು ಬಂದಾಗ ಹಲವಾರು ಜನರು ತಾವು ಕೂಡ ಈ ರೀಲ್ ಗೆ ಅಭಿನಯಿಸಿ ಸಾಮಾಜಿಕ ಜಾಲತಾಣಕ್ಕೆ ಬಿಟ್ಟರಷ್ಟೇ. ಚಿಕ್ಕವರು ದೊಡ್ಡವರು ಎಂಬ ಭೇದ ಭಾವವಿಲ್ಲದೆ ಜನರು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳಲು ಹೆಣಗುತ್ತಾರೆ. ಲೈಕ್ ಗಳು ಕಮೆಂಟ್ಗಳಿಗಾಗಿ ಹಾತೊರೆಯುತ್ತಾರೆ. ಇನ್ನೂ ವಿಚಿತ್ರವೆಂದರೆ ತಾವು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ ಕೂಡಲೇ ತಮ್ಮ ಹತ್ತಿರದವರಿಗೆ ಫೋನ್ ಮಾಡಿ ಕೂಡಲೇ ಆ ಪೋಸ್ಟ್ ಗೆ ಲೈಕ್ ಮತ್ತು ಕಮೆಂಟ್ ಮಾಡಲು ಒತ್ತಾಯಿಸುತ್ತಾರೆ. ಸಾಕಷ್ಟು ಲೈಕ್ ಗಳು ಕಮೆಂಟ್ಗಳು ಬಂದಾಗ ಖುಷಿಪಡುವ ಅವರು, ಉತ್ತಮ ಪ್ರತಿಕ್ರಿಯೆ ಬಾರದೆ ಹೋದರೆ ನಿರಾಶೆಯಿಂದ ಕುಸಿದು ಹೋಗುತ್ತಾರೆ.ಇದು ಒಂದು ರೀತಿಯ ಅಸಂಬದ್ಧ ನಡವಳಿಕೆ. ವಿಚಿತ್ರ ಹಪಹಪಿಕೆ. ಮನೋವೈಜ್ಞಾನಿಕ ಭಾಷೆಯಲ್ಲಿ ಹೇಳುವುದಾದರೆ ಇದೊಂದು ರೀತಿಯ ಡಿಸಾರ್ಡರ್. ಐಡೆಂಟಿಟಿ ಕ್ರೈಸಿಸ್ ಎಂದು ಕೂಡ ಹೇಳಬಹುದು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ತನ್ನ ತವರಿಗೆ ಹೋದ ಓರ್ವ ಹೆಣ್ಣು ಮಗಳು ತನ್ನ ಸಹೋದರಿ ಮತ್ತು ಸೋದರ ಮಾವನ ಜೊತೆಗೆ ಕರಿಮಣಿ ಮಾಲೀಕ ನೀನಲ್ಲ ಎಂಬ ರೀಲಗೆ ಹೆಜ್ಜೆ ಹಾಕಿದಳಲ್ಲದೇ ಅದನ್ನು ಸಾಮಾಜಿಕ ಜಾಲತಾಣಕ್ಕೆ ಹರಿಬಿಟ್ಟಳು. ಈ ರೀಲನ್ನು ನೋಡಿದ ಆಕೆಯ ಪತಿಯ ಸ್ನೇಹಿತರು ಈ ಕುರಿತು ಆಕೆಯ ಪತಿಯನ್ನು ವಿಚಾರಿಸಲಾಗಿ ಆತನಿಗೆ ಮುಜುಗರ ಮತ್ತು ಅವಮಾನ ಒಟ್ಟೊಟ್ಟಿಗೆ ಆಯಿತು. ಮೊದಲೇ ವ್ಯಸನಗಳಿಗೆ ತುತ್ತಾದ ಆ ವ್ಯಕ್ತಿ ತನ್ನ ಮಾನಸಿಕ ಸಮತೋಲನವನ್ನು ಕಳೆದುಕೊಂಡು ಕೂಡಲೇ ಪತ್ನಿಗೆ ಫೋನ್ ಮಾಡಿ ಆ ರೀಲನ್ನು ಸಾಮಾಜಿಕ ಜಾಲತಾಣಗಳಿಂದ ತೆಗೆದು ಹಾಕಬೇಕು ಎಂದು ಪರಿಪರಿಯಾಗಿ ಹೆಂಡತಿಗೆ ಹೇಳಿದನು. ಇದು ಆತನ ಪತ್ನಿಗೆ ಸಮಂಜಸ ಎನಿಸದೆ ತಾನು ರೀಲ್ ಮಾಡಿ ಹಾಕಿದರೆ ತಪ್ಪೇನು ಎಂದು ವಾದ ಮಾಡಿದಳು. ವಾದ ಜಗಳಕ್ಕೆ ತಿರುಗಿತು. ಪರಿಣಾಮವಾಗಿ ಕ್ಷಣಿಕ ದೌರ್ಬಲ್ಯಕ್ಕೊಳಗಾದ ಆತ ಕೂಡಲೇ ಆತ್ಮಹತ್ಯೆಗೆ ಶರಣಾದನು. ಇದಲ್ಲವೇ ದುರಂತ!! ತಾನು ಮಾಡಿದ ಸಣ್ಣದೊಂದು ಮನರಂಜನೆ ತನ್ನ ಪತಿಯ ಜೀವಕ್ಕೆ ಮುಳುವಾಗುತ್ತದೆ ಎಂದು ಆಕೆ ಏನು ಬಲ್ಲಳು?? ಜೀವಿತದ ಕೊನೆಯವರೆಗೂ ಜನರ ದೂಷಣೆಗೆ ಆಕೆ ಗುರಿಯಾಗಬೇಕು.ಪತ್ನಿ ತನ್ನ ಮಾತು ಕೇಳಲಿಲ್ಲ ಎಂಬ ಒಂದೇ ಕಾರಣಕ್ಕೆ ತತ್‌ಕ್ಷಣದ ನಿರ್ಧಾರ ತೆಗೆದುಕೊಂಡ ವ್ಯಕ್ತಿ ತನ್ನ ಕುಟುಂಬವನ್ನು ನಡು ನೀರಿನಲ್ಲಿ ಕೈಬಿಟ್ಟಂತಾಗಲಿಲ್ಲವೇ? ಈ ಪ್ರಮಾದಗಳಿಗೆ ಹೊಣೆ ಯಾರು?

ನಿಜ ಹೇಳಬೇಕೆಂದರೆ ಈ ರೀತಿಯ ರೀಲ್ಗಳಿಗೆ ಅಭಿನಯಿಸುತ್ತಾ ಸಾಕಷ್ಟು ಜನರ ಅಭಿನಯ ಪ್ರತಿಭೆ ಹೊರಬಂದಿದೆ. ಮತ್ತೆ ಕೆಲವರು ತಮ್ಮೆಲ್ಲ ಹಳೆಯ ಸ್ನೇಹಿತರೊಂದಿಗೆ, ಸಂಗಾತಿಗಳೊಂದಿಗೆ ಮನರಂಜನೆಗಾಗಿ ಈ ರೀತಿ ರೀಲ್ ಗಳನ್ನು ಮಾಡುವ ಮೂಲಕ ಮಾನಸಿಕ ಉಲ್ಲಾಸವನ್ನು ಪಡೆಯುವುದು ಉಂಟು. ಇನ್ನು ಕೆಲವರು ವಿಕೃತವಾಗಿ, ವಿಡಂಬನಾತ್ಮಕವಾಗಿ ಅಭಿನಯಿಸಿ ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದು ಸಾಮಾನ್ಯವಾಗಿದೆ. ಎಲ್ಲವನ್ನು ಎಲ್ಲರೂ ಮಾಡಬೇಕೆಂದಿಲ್ಲ, ಮಾಡಬಾರದು ಎಂದು ಕೂಡ ಇಲ್ಲ. ತಪ್ಪು ಸರಿಗಳು ಅವರವರ ಮನಸ್ಥಿತಿಗೆ ಬಿಟ್ಟದ್ದು. ಲೋಕೋ ಭಿನ್ನ ರುಚಿಃ ....ಯಾರನ್ನು ಕೂಡ ನಿರ್ಣಯಾತ್ಮಕ ದೃಷ್ಟಿಯಿಂದ ನೋಡಬಾರದು. ಅವರವರ ಕ್ರಿಯೆಗಳು ಅವರವರಿಗೆ ಎಂಬ ವಿಶಾಲ ಮನೋಭಾವ ಇರಬೇಕು.

ಇತ್ತೀಚೆಗೆ ಹುಬ್ಬಳ್ಳಿ ಶಹರದ ಬಳಿ ಒಂದು ಅಪಘಾತವಾಯಿತು. ಬೆಂಗಳೂರಿನಲ್ಲಿ ವಾಸಿಸುತ್ತಿದ್ದ ಉತ್ತರ ಕರ್ನಾಟಕ ಮೂಲವಾಸಿಗಳಾದ ದಂಪತಿಗಳು ಮದುವೆ ಕಾರ್ಯಕ್ರಮಕ್ಕೆ ತಮ್ಮೂರಿಗೆ ಬಂದಿದ್ದು ಸತತವಾಗಿ ಡ್ರೈವಿಂಗ್ ಮಾಡಿ ಸುಸ್ತಾದ ಪತಿ ತಾನು ಹಿಂದೆ ಕುಳಿತುಕೊಂಡು ಪತ್ನಿಗೆ ಡ್ರೈವಿಂಗ್ ಮಾಡಲು ಹೇಳಿದನು. ಪ್ರತಿ ಸಲ ಬೆಂಗಳೂರಿನಿಂದ ತಮ್ಮೂರಿಗೆ ಬರುತ್ತಿದ್ದ ಆ ಜೋಡಿಗಳಲ್ಲಿ ಪತಿ–ಪತ್ನಿಯರಿಬ್ಬರು ಡ್ರೈವಿಂಗ್ ಮಾಡುವುದು ಸಹಜವಾಗಿತ್ತು. ಆದರೆ ಅಂದು ವಿಧಿಯ ವಿಪರ್ಯಾಸವೋ ಗೊತ್ತಿಲ್ಲ... ಹಿಂದಿನಿಂದ ಬಂದ ಟ್ರಕ್ಕೊಂದು ಗಾಡಿಯ ಹಿಂಬದಿಗೆ ಹಾಯ್ದು ಪರಿಣಾಮವಾಗಿ ನಿದ್ದೆಗೆ ಜಾರಿದ ಪತಿಯ ತಲೆ ಕಾರಿನ ಮೇಲ್ಭಾಗಕ್ಕೆ ಬಡಿದು ಆತನ ತಲೆ ಬುರುಡೆಗೆ ಪೆಟ್ಟಾಗಿ ಆಸ್ಪತ್ರೆಗೆ ಸೇರಿಸಿದ ಕೆಲವೇ ಗಂಟೆಗಳಲ್ಲಿ ಆತ ಅಸು ನೀಗಿದನು. ಅಂತ್ಯಸಂಸ್ಕಾರಕ್ಕೆ ಬಂದ ಕೆಲ ಜನರ ಬಾಯಲ್ಲಿ "ಅಯ್ಯೋ, ಹೆಣ್ಣು ಮಕ್ಕಳ ಕೈಯಲ್ಲಿ ಡ್ರೈವಿಂಗ್ ಕೊಟ್ಟರೆ ಹೀಗೇ ಆಗುವುದು" ಎಂಬ ಮಾತುಗಳು ಕೇಳಿ ಬಂದವು. ಅಕಸ್ಮಾತ್ ಈ ಮಾತುಗಳು ಮೃತ ವ್ಯಕ್ತಿಯ ಪತ್ನಿಯ ಕಿವಿಗೆ ಬಿದ್ದರೆ ಮುಂದೆ ಎಂದಾದರೂ ಆಕೆ ದೃಢ ವಿಶ್ವಾಸದಿಂದ ವಾಹನ ಚಲಾಯಿಸಬಲ್ಲಳೇ?? ಈಗಾಗಲೇ ನಡೆದ ಕೃತ್ಯಕ್ಕೆ ತನ್ನನ್ನು ತಾನು ದೂಷಿಸಿಕೊಳ್ಳುತ್ತಿರುವ ಆಕೆಯ ಮನಸ್ಥಿತಿಯ ಮೇಲೆ ಉಂಟಾಗುವ ಪರಿಣಾಮ ಅದೆಷ್ಟು ಗಂಭೀರವಾಗಬಹುದು ಎಂಬುದರ ಅಂದಾಜು ಯಾರಿಗಾದರೂ ಇದೆಯೇ??

ಕಾರಣಗಳು ಅದೇನೆ ಇರಲಿ.... ಚಲನಚಿತ್ರಗಳಲ್ಲಿ ಬರುವ ಹಾಡುಗಳು ಆಯಾ ಸಂದರ್ಭಕ್ಕೆ ಅನುಗುಣವಾಗಿ ನಿರ್ದೇಶಿಸಲ್ಪಟ್ಟಿರುತ್ತವೆ. ಅವುಗಳನ್ನು ನಿಜ ಜೀವನದಲ್ಲಿ ರೀಲ್ ಗಳನ್ನಾಗಿ ಅಭಿನಯಿಸುವಾಗ ಜಾಗ್ರತೆ ವಹಿಸುವುದು ವೈಯುಕ್ತಿಕ ಮತ್ತು ಸಮಾಜದ ಆರೋಗ್ಯಕ್ಕೆ ಕ್ಷೇಮಕರ. ಕೆಲ ಮನರಂಜನೆಗಳು ಮನಸ್ಸಿಗೆ ಮುದ ನೀಡುತ್ತವೆ. ಅದೆಷ್ಟೇ ನೋವು, ಸಂಕಟಗಳಿದ್ದರೂ ಕೆಲ ಕಾಮಿಡಿ ಶೋಗಳ ವೀಕ್ಷಣೆ ಮನುಷ್ಯ ತನ್ನ ಮನೋ ದೈಹಿಕ ತೊಂದರೆಗಳಿಂದ ಕೆಲ ಹೊತ್ತು ಮುಕ್ತಿ ಪಡೆಯಲು ಅನುವು ಮಾಡಿಕೊಡುತ್ತವೆ. ಆದರೆ ಕೋಮು ಸೌಹಾರ್ದತೆಗೆ ಧಕ್ಕೆ ಬರುವಂತಹ, ಸಾಮಾಜಿಕ ವೈಮನಸ್ಯವನ್ನು ಹರಡುವ, ತಂತಮ್ಮ ರಾಜಕೀಯ ಬೇಳೆಗಳನ್ನು ಬೇಯಿಸಿಕೊಳ್ಳಲು ತಮ್ಮ ವಿರೋಧ ಪಕ್ಷಗಳ ಮೇಲೆ ಇಲ್ಲಸಲ್ಲದ ಆರೋಪಗಳನ್ನು ರಾಜಾರೋಷವಾಗಿ ಮಾಡುವ ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ನಾವು ನೋಡುತ್ತೇವೆ. ಎಷ್ಟೋ ಬಾರಿ ಕರಿಮಣಿ ಮಾಲೀಕ ನೀನಲ್ಲ ಎಂಬ ಹಾಡಿನಲ್ಲಿ ಬರುವ ನಿಜದಂತಿರುವ ಸುಳ್ಳಲ್ಲ, ಸುಳ್ಳುಗಳೆಲ್ಲ ನಿಜವಲ್ಲ, ಸುಳ್ಳಿನ ನಿಜವು ಸುಳ್ಳಲ್ಲ ಎಂಬ ಸಾರ್ವತ್ರಿಕ ಸತ್ಯವನ್ನು ಸಾಮಾಜಿಕ ಜಾಲತಾಣಗಳು ಮುಖಕ್ಕೆ ರಾಚುವಂತೆ ಹೇಳುತ್ತವೆ.

ಇಂದಿನ ಯುವ ಪೀಳಿಗೆಯಂತೂ ಆಧುನಿಕ ಕಾಲ ಪ್ರವಾಹದ ಭಾಗವಾಗಿ ತಮ್ಮನ್ನು ತಾವು ತೋರಿಸಿಕೊಳ್ಳುವ ಭರದಲ್ಲಿ ತಮ್ಮದಲ್ಲದ ಸಂಸ್ಕೃತಿಗಳಿಗೆ (ವಿಕೃತಿಗಳಿಗೆ), ಆಚಾರ(ಅನಾಚಾರ)ಗಳಿಗೆ ಒಡ್ಡಿಕೊಳ್ಳುತ್ತಿದ್ದಾರೆ. ಆದರೆ ಎಲ್ಲಾ ಸಮಯವೂ ನಮ್ಮದಾಗಿರುವುದಿಲ್ಲ ಅಂತೆಯೇ ಸಮಯಾಸಮಯಗಳ ಅರಿವನ್ನು ಹೊಂದಿದ್ದು ಮನರಂಜನೆ ಕೇವಲ ಮನಸ್ಸಿನ ಸಂತೋಷಕ್ಕೆ ಇರಬೇಕೇ ಹೊರತು ಬೇರೆಯವರ ಭಾವನೆಗಳಿಗೆ ನೋವುಂಟು ಮಾಡುವಂತೆ ಇರಬಾರದು.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ಹಂಪಿ ಟೈಮ್ಸ್

ವಿಜಯನಗರದ ಹೆಮ್ಮೆ

ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ

www.hampitimes.com
epaper.hampitimes.com

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಪ್ರೀತಿಯಲ್ಲೂ ಸಾಮಾಜಿಕ ನ್ಯಾಯ ಅಡಗಿದೆ

## ನ್ಯಾ.ಅಬ್ದುಲ್ ರಹೀಮಾನ ಎ. ನಂದಗಡಿ ಅಭಿಮತ | ಕಾನೂನು ಅರಿವು ನೆರವು ಸಾಮಾಜಿಕ ನ್ಯಾಯದಲ್ಲಿ ನಮ್ಮನ್ನು ನಾವು ಪರಾಮರ್ಶೆ ಮಾಡಿಕೊಳ್ಳುವ ಅಗತ್ಯವಿದೆ



**ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘ, ಕಂದಾಯ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮವು ಗುರುವಾರ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆಯಿತು.

ನ್ಯಾ.ಅಬ್ದುಲ್ ರಹೀಮಾನ ಎ. ನಂದಗಡಿ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನ್ಯಾಯ ಎಂಬುದು ಕೇವಲ ನ್ಯಾಯಾಂಗದಲ್ಲಿ ಮಾತ್ರ ಇರುವುದಿಲ್ಲ. ಅದು ಸಮಾಜದಲ್ಲಿ ಕೂಡ ಇರುತ್ತದೆ. ನಾವು ಮಾಡುವ ಕೆಲಸದಲ್ಲಿ, ನಾವು ಯೋಚಿಸುವ ಯೋಚನೆಯಲ್ಲಿ ನಾವು ತೋರಿಸುವ ಪ್ರೀತಿ, ಕಾಳಜಿಯಲ್ಲಿ ಸಾಮಾಜಿಕ ನ್ಯಾಯ ಅಡಗಿರುತ್ತದೆ. ಸಾಮಾಜಿಕ ನ್ಯಾಯದಲ್ಲಿ ನಮ್ಮನ್ನು ನಾವು ಪರಾಮರ್ಶೆ ಮಾಡಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ನ್ಯಾ.ಸಂಜೀವ್‌ಕುಮಾರ ಜಿ ಅವರು ಮಾತನಾಡಿ, ಭಾರತ ಸಂವಿಧಾನದ ಪೀಠಿಕೆಯಲ್ಲಿ ಸಾಮಾಜಿಕ ನ್ಯಾಯದ ಉಲ್ಲೇಖವಿದೆ. ಸಂವಿಧಾನದ ಭಾಗ 3 ರಲ್ಲಿ ಮೂಲಭೂತಹಕ್ಕುಗಳು ಕಂಡು ಬರುತ್ತವೆ. ಅದರಲ್ಲಿ ಮುಖ್ಯವಾಗಿ ಎರಡು ಹಕ್ಕುಗಳು ಪ್ರಮುಖವೆನಿಸುತ್ತವೆ. ಜೀವಿಸುವ ಹಕ್ಕು ನಮಗೆ ಸಮಾಜದಲ್ಲಿ ಘನತೆ, ಗೌರವ, ಸಹಬಾಳ್ವೆಯಿಂದ ಬಾಳಲು ಅವಕಾಶ ಕಲ್ಪಿಸಿದೆ. ಇದನ್ನು ಕಾನೂನಾತ್ಮಕವಾಗಿ ಕಾಪಾಡಲು ಸಂವಿಧಾನಿಕ ಪರಿಹಾರದ ಹಕ್ಕನ್ನು ಸಂವಿಧಾನ ರೂಪಿಸಿದೆ. ಅದನ್ನು ಉಪಯೋಗಿಸಿ ನ್ಯಾಯಾಲಯಕ್ಕೆ ಮೊರೆ ಹೋಗಬಹುದು. ಸಂವಿಧಾನದ ಪ್ರತಿಯನ್ನು ಪ್ರತಿಯೊಬ್ಬರ ಮನೆಯಲ್ಲಿ ಇರಿಸಿ, ಅದರ ಮಹತ್ವವನ್ನು ಅರಿತು ಎಲ್ಲರೂ ಸಂವಿಧಾನವನ್ನು ಗೌರವಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹೊಸಪೇಟೆ ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ನ್ಯಾ. ಹೇಮಲತಾ ಬಿ.ಹೆಚ್., ನ್ಯಾ.ರಮೇಶ್ ಬಾಬು ಬಿ.ಎನ್., ತಾಲ್ಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ನ್ಯಾ. ಕಿಶನ್ ಬಿ.ಮಾಡಲಗಿ, ನ್ಯಾ.ಚೈತ್ರ ಜೆ., ವಕೀಲರ ಸಂಘದ ಅಧ್ಯಕ್ಷರಾದ ಕೆ ಪ್ರಹ್ಲಾದ್, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪಿ ಶ್ರೀನಿವಾಸ ಮೂರ್ತಿ, ಗ್ರೇಡ್ 2 ತಹಶೀಲ್ದಾರ್‌ರಾದ ವೇಂಕಟೇಶ್, ತಾಲೂಕು ಕಚೇರಿ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಯಾರು ಏನೇ ಹೇಳಿದರೂ ನಾವು 20 ಲೋಕಸಭಾ ಸ್ಥಾನಗಳನ್ನು ಗೆಲ್ಲುವುದು ಖಚಿತ: ಮುಖ್ಯ ಮಂತ್ರಿ ಸಿದ್ದರಾಮಯ್ಯ



**ಬೆಂಗಳೂರು:** ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಕನಿಷ್ಠ 20 ಸ್ಥಾನಗಳನ್ನು ಈ ಬಾರಿ ಗೆದ್ದೇ ಗೆಲ್ಲುತ್ತೇವೆ. ಯಾರು ಏನೇ ಹೇಳಿದರೂ ನಾವು ನೂರಕ್ಕೆ ನೂರು ಗೆಲ್ಲುತ್ತೇವೆ. ಒಗ್ಗಟ್ಟಿನಿಂದ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳಿದ್ದರೆ ಅದನ್ನು ಮರೆತು ಗೆಲ್ಲಲೇಬೇಕು ಎಂಬ ಛಲ ದಿಂದ ಕೆಲಸ ಮಾಡಬೇಕು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು. ಅವರು ಗುರುವಾರ ಕೆ.ಪಿ.ಸಿ.ಸಿ. ಕಛೇರಿಯಲ್ಲಿ ಮುದ್ದಹಮುಮೇಗೌಡ ಅವರ ಕಾಂಗ್ರೆಸ್ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಮುದ್ದುಹನುಮೇ ಗೌಡರು ಮೂಲತಃ ಕಾಂಗ್ರೆಸ್ ನವರು. ಕಳೆದ ವಿಧಾನಸಭೆಗೂ ಮುನ್ನ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದರು. ಅವರ ತಪ್ಪಿನ ಅರಿವಾಗಿ ಕಾಂಗ್ರೆಸ್ ಪಕ್ಷಕ್ಕೆ ಮರಳಿ ಸೇರ್ಪಡೆಯಾಗಿದ್ದಾರೆ. ತಪ್ಪು ಮಾಡಿದ್ದೇನೆ, ಕ್ಷಮೆ ಇರಲಿ ಎಂದು ಅವರು ಹೇಳಿದ್ದಾರೆ. ತಪ್ಪು ಮಾಡಿದ ಮೇಲೆ ಪಶ್ಚಾತ್ತಾಪ ಮುಖ್ಯ. ಪಶ್ಚಾತ್ತಾಪಕ್ಕಿಂತ ದೊಡ್ಡ ಶಿಕ್ಷೆ ಮತ್ತೊಂದಿಲ್ಲ. ಪಕ್ಷಕ್ಕೆ ಯಾರೇ ಬಂದರೂ, ಬೇರೆ ನಮ್ಮ ಪಕ್ಷದವರನ್ನೂ ನಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುತ್ತೇವೆ ಎಂದು ಪಕ್ಷದ ಅಧ್ಯಕ್ಷರು ಹೇಳಿದ್ದಾರೆ. ಎಲ್ಲಾ ಜಿಲ್ಲೆಯ ಮುಖಂಡರೆಲ್ಲರೂ ಸೇರಿ ಅವರನ್ನು ಸೇರಿಸಿಕೊಳ್ಳಲು ಒಪ್ಪಿದ್ದಾರೆ ಎಂದರು.

**ಒಳ್ಳೆಯ ವಾತಾವರಣ:** ಮುಂದಿನ ಲೋಕಸಭಾ ಚುನಾವಣೆಯಲ್ಲಿ ಜಿಲ್ಲೆಯವರು ಯಾರನ್ನು ಸೂಚಿಸುತ್ತಾರೋ ಅವರನ್ನೇ ಅಭ್ಯರ್ಥಿ ಮಾಡುತ್ತೇವೆ. ತುಮಕೂರು ಜಿಲ್ಲೆಯಲ್ಲಿ ಗೆಲ್ಲಲು ಅವಕಾಶವಿದೆ. ಐದು ಗ್ಯಾರಂಟಿಗಳನ್ನು ನುಡಿದಂತೆ ಜಾರಿ ಮಾಡಿದೆ. ಮಾತನ್ನು ಉಳಿಸಿಕೊಂಡಿದ್ದೇವೆ. ಮುದ್ದು ಹನುಮೇಗೌಡರನ್ನು ಪಕ್ಷಕ್ಕೆ ಹಾರ್ದಿಕವಾಗಿ ಸ್ವಾಗತಿಸುತ್ತೇನೆ ಎಂದು ಹೇಳಿದರು.

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

23-02-2024 – ಶುಕ್ರವಾರ

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆಶ್ಲೇಷ |
| ಯೋಗ | : ಶೋಭನ |
| ಕರಣ | : ವಾಣಿಜ |
| ಕರಣ | : ವಿಷ್ಟಿ |
| ಸೂರ್ಯೋದಯ | : 06.55.17 |
| ಸೂರ್ಯಾಸ್ತ | : 18:25:42 |
| ರಾಹು | : 11:14–12:40 |
| ಯಮಘಂಡ | : 15:33–16:59 |
| ಗುಳಿಕ | : 08:22–09:48 |

## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 22-02-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.55 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 507 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.106 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1608.23 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 11227 ಕ್ಯುಸೆಕ್ |
| ಸಾಮರ್ಥ್ಯ | 34.221 ಟಿಎಂಸಿ |

# ವಾಹನ ಸವಾರರು ಹೆಲ್ಮೆಟ್ ಧರಿಸದಿದ್ದರೆ ಪ್ರಾಣಕ್ಕೆ ಅಪಾಯ

### ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಬಿ.ಎಲ್.ಶ್ರೀಹರಿಬಾಬು ಹೇಳಿಕೆ। ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ



■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ

ಮೊಬೈಲ್ ನಿಂದ ನಾವುಗಳು ಸ್ವಾತಂತ್ರ್ಯ ಕಳೆದುಕೊಂಡಿದ್ದೇವೆ, ಮೊಬೈಲ್ ಬಂದಾಗಿನಿಂದ ದೈಹಿಕ ಚಟುವಟಿಕೆಗಳು ನಿಷ್ಕ್ರೀಯ ಗೊಂಡಿವೆ ಎಂದು ವಿಜಯನಗರ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಬಿ.ಎಲ್.ಶ್ರೀಹರಿಬಾಬು ಹೇಳಿದರು.

ಪಟ್ಟಣದ ಜಿ.ಟಿ.ಟಿ.ಸಿ.ಕಾಲೇಜಿನಲ್ಲಿ,ದೇವಲಾಪುರ ಗ್ರಾಮದ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜುಕೇಷನಲ್ ಟ್ರಸ್ಟ್ ವಿಜಯನಗರ ಜಿಲ್ಲಾ ಪೋಲೀಸ್, ಕೂಡ್ಲಿಗಿ ಉಪವಿಭಾಗ ಹಾಗು ಮರಿಯಮ್ಮನಹಳ್ಳಿ ಪೊಲೀಸ್ ಠಾಣೆಯ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ, ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮೊಬೈಲ್ ಅನ್ನು ವಾಹನ ಚಲಾಯಿಸುವಾಗ ಬಳಸದೆ ಎಚ್ಚರಿಕೆಯಿಂದ ಚಲಾಯಿಸಿ.ಅಲ್ಲದೆ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಅನ್ನು ಬಳಸಬೇಕು, ಹೆಲ್ಮೆಟ್ ಬಳಸದೆ ಇದ್ದರೆ ನಿಮ್ಮ ಪ್ರಾಣಕ್ಕೆ ಕುತ್ತಾಗುವ ಸಾಧ್ಯತೆ ಇರುತ್ತದೆ. ಅಲ್ಲದೆ ಪ್ರತಿಯೊಬ್ಬರೂ ತಮ್ಮ ವಾಹನಗಳ ದಾಖಲೆಗಳು, ಡ್ರೈವಿಂಗ್ ಲೈಸೆನ್ಸ್ ಕಡ್ಡಾಯವಾಗಿ ನಿಮ್ಮೊಂದಿಗಿರಲಿ. ವಾಹನ ಸವಾರರು ಚಾಲನಪರವಾನಿಗಿ, ವಾಹನ ದಾಖಲೆಗಳಿದ್ದರೆ ಅಪಘಾತದ ವೇಳೆ ಸಹಕಾರಿಯಾಗುತ್ತವೆ. ಅವಸರದ, ವೇಗದ ಚಾಲನೆ ಶಾಶ್ವತ ಅಂಗವೈಕಲ್ಯಕ್ಕೆ ಕಾರಣವಾಗುತ್ತದೆ ಆದ್ದರಿಂದ ವಿಧ್ಯಾರ್ಥಿಗಳು,ಯುವಕರು ಜಾಗೃತರಾಗಿ ವಾಹನಗಳ ದಾಖಲೆಗಳನ್ನು ಸರಿಪಡಿಸಿ ಕೊಳ್ಳಿ ಎಂದು ಕರೆನೀಡಿದರು.

ಪಟ್ಟಣದ ಪಿ.ಎಸ್.ಐ.ಮೌನೇಶ್ ರಾಥೋಡ್ ಮಾತನಾಡಿ, ಯುವಕರು ಬೈಕ್ ಚಲಾಯಿಸುವ ವೇಳೆ, ಜಾಗರೂಕರಾಗಿ ಚಲಾಯಿಸಬೇಕು, ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು, ನಿಮ್ಮ ಕೂದಲು ಹಾಳಾಗುತ್ತದೆ ಎಂಬುದಾಗಲಿ, ಬಿಸಿಲಿನ ತಾಪಮಾನದಿಂದ ರಕ್ಷಿಸಿಕೊಳ್ಳಲು ಎಂಬ ಸಬೂಬು ಹೇಳದೆ ಹೆಲ್ಮೆಟ್ ಧರಿಸಿದರೆ ಜೀವಹಾನಿ ತಪ್ಪುತ್ತದೆ. ಅಪ್ರಾಪ್ತರು ವಾಹನ ಚಲಾಯಿಸಬಾರದು. ಅಲ್ಲದೆ ಸಂಚಾರಿ ನಿಯಮಗಳನ್ನು ಕೂಡ ಕಡ್ಡಾಯವಾಗಿ ಪಾಲಿಸಲು ಸಲಹೆ ಮಾಡಿದರು. ಕಾಲೇಜಿನ ಪ್ರಾಚಾರ್ಯ ಅಂಜನ್ ಸಭೆಯ ಅಧ್ಯಕ್ಷತೆವಹಿಸಿದ್ದರು, ಟ್ರಸ್ಟಿನ ಸಂಸ್ಥಾಪಕ ಭೀಮರಾಜ್, ಐಟಿಐ ಕಾಲೇಜಿನ ರಾಮಾಂಜನೇಯ, ಭೋದಕ ಸಿಬ್ಬಂದಿಗಳು ಸೇರಿದಂತೆ ಇತರರಿದ್ದರು.

## ಗುಡೇಕೋಟೆ ಉತ್ಸವ: ಫೆ.24ರಂದು ನಾನಾ ಕಾರ್ಯಕ್ರಮಗಳು

■ ಹಂಪಿ ಟೈಮ್ಸ್ ಹೊಸಪೇಟೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ವಿಜಯನಗರ ಜಿಲ್ಲಾಡಳಿತ ಇವರ ಸಹಯೋಗದಲ್ಲಿ ಫೆ.24ರಂದು ನಡೆಯುವ ಗುಡೇಕೋಟೆ ಉತ್ಸವದಲ್ಲಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಫೆ.24ರಂದು ಶನಿವಾರದಂದು ಒನಕೆ ಓಬವ್ವ ವೇದಿಕೆಯಲ್ಲಿ ಸಂಜೆ 4 ಗಂಟೆಗೆ ಗುಡೇಕೋಟೆಯ ಶ್ರೀ ಶಿವ ಪಾರ್ವತಿ ದೇವಸ್ಥಾನದಿಂದ ಒನಕೆ ಓಬವ್ವ ವೇದಿಕೆಯರೆಗೆ ವಿವಿಧ ಕಲಾ ತಂಡಗಳೊಂದಿಗೆ ಶೋಭಾ ಯಾತ್ರೆ ನಡೆಯಲಿದೆ. ಸಂಜೆ 6 ಗಂಟೆಗೆ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ. ಅಂದು ರಾತ್ರಿ 8 ಗಂಟೆಗೆ ಹೊಸಪೇಟೆಯ ಶ್ರೀ ಅಂಜಲಿ ಭರತನಾಟ್ಯ ಕಲಾ ಕೇಂದ್ರದಿಂದ ಭರತನಾಟ್ಯ ಕಾರ್ಯಕ್ರಮ, 8.10 ರಿಂದ 8.20ರವರೆಗೆ ಮಂಗಳೂರಿನ ಕಿರಣ್ ಮತ್ತು ತಂಡದಿಂದ ಸಿಂಗಾರಿ ಮೇಳಂ (ನಂದಿನಿ ಕೇರಳ ಚಂಡೆ), 8.20 ರಿಂದ 9.40ರವರೆಗೆ ಸ್ಥಳೀಯ ಕಲಾವಿದರಿಂದ ಮನೋರಂಜನಾ ಕಾರ್ಯಕ್ರಮಗಳು, ಕೂಡ್ಲಿಗಿ ಮತ್ತು ಬೆಂಗಳೂರಿನ ಕೋಗಳಿ ಕೊಟ್ರೇಶ್ ತಂಡದವರಿಂದ ನಗೆಹಬ್ಬ ಹಾಗೂ ನೃತ್ಯ ಪ್ರದರ್ಶನ ನಡೆಯಲಿದೆ.

## ಫೆ.24ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

■ ಹಂಪಿ ಟೈಮ್ಸ್ ಹೊಸಪೇಟೆ

ಜೆಸ್ಕಾಂನ ಹೊಸಪೇಟೆ ನಗರದ ಸಂಕ್ಲಾಪುರ ವಿಭಾಗದ 110/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಇರುವ ಕಾರಣ ಫೆ.24 ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಅಂದು ರಮಾ, ಹೊಸಪೇಟೆ ನಗರ, ಕೆ.ಒ.ಎಫ್, ವಿಜಯನಗರ, ಟಿ.ಎಸ್.ಪಿ, ಜಂಬುನಾಥ ಗುಡಿ, ಸಾಯಿಪೇಟ್, ರಾಜಪುರ, ವಡ್ರಹಳ್ಳಿ ಫಿಡರ್ಸ್ ವ್ಯಾಪ್ತಿಗೆ ಒಳಪಡುವ ಸುತ್ತಲಿನ ಪ್ರದೇಶಗಳಾದ ಬಳ್ಳಾರಿ ರೋಡ್, ಕೊಂಡನಾಯಕನ ಹಳ್ಳಿ, ಅನಂತಶಯನಗುಡಿ, ಸಂಕ್ಲಾಪುರ ಇಂಡಸ್ಟ್ರೀಯಲ್ ಏರಿಯಾ, ಕರ್ನಾಟಕ ಆಯಿಲ್ ಫ್ಯಾಕ್ಟರಿ ಏರಿಯಾ, ಕಾರಿಗನೂರ, ಸಂಕ್ಲಾಪುರ, ಸಾಯಿಬಾಬಾ ಗುಡಿ ಏರಿಯಾ, ಡ್ಯಾಮ್ ರೋಡ್, ಟಿ.ಬಿ ಡ್ಯಾಮ್, ಎನ್.ಸಿ ಕಾಲೋನಿ, ಗಾಂಧೀ ಕಾಲೋನಿ, ಗೋಕುಲ ನಗರ, ನಿಶಾನಿ ಕ್ಯಾಂಪ್, ರಾಜಾಪುರ ಕಲ್ಲಹಳ್ಳಿ, ವಡ್ರಹಳ್ಳಿ, ರಾಯರ ಕೇರೆ, ಜಿ.ಜಿ ಕ್ಯಾಂಪ, ಇಂಗಳಗಿ ಮತ್ತು ನಾಗಪ್ಪ ಕ್ಯಾಂಪ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸಬೇಕು ಎಂದು ನಗರದ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸುಳ್ಳು ಕೇಸ್ ದಾಖಲು ವಿರೋಧಿಸಿ ಪ್ರತಿಭಟನೆ



**ಮೊದಲ ಪುಟದಿಂದ**

ವಕೀಲರ ಹಿತರಕ್ಷಣಾ ಕಾಯ್ದೆಯನ್ನು ಕೂಡಲೇ ಜಾರಿಗೆ ತರಲು ಒತ್ತಾಯಿಸಲಾಯಿತು. ಅಲ್ಲಿಂದ ತಹಸೀಲ್ದಾರ್ ಕಚೇರಿಗೆ ಆಗಮಿಸಿ, ವಕೀಲರ ಸಂಘದ ಜಿಲ್ಲಾಧ್ಯಕ್ಷ ಕೆ.ಪ್ರಹ್ಲಾದ್ ಮಾತನಾಡಿ, ರಾಮನಗರದ ಐಜೂರು ಪೋಲೀಸ್ ಠಾಣೆಯಲ್ಲಿ ವಕೀಲರು ಮೇಲೆ ಸಕಾರಣವಿಲ್ಲದೆ 50 ಜನ ರಾಮನಗರ ವಕೀಲರ ಮೇಲೆ ಸುಳ್ಳು ಕೇಸ್ ದಾಖಲಿಸಿದ ರಾಮನಗರ ಪಿ.ಎಸ್.ಐ. ಇವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ವಕೀಲರ ವಿರುದ್ಧವೇ ಪೋಲೀಸರು ಈ ರೀತಿಯ ಸುಳ್ಳು ಕೇಸುಗಳನ್ನು ದಾಖಲಿಸುವುದು ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಟಿಸಿದ್ದು ಕಾನೂನು ರಕ್ಷಣೆ ಮಾಡುವ ಮತ್ತು ಪಾಲನೆ ಮಾಡುವ ವಕೀಲರ ಪರಿಸ್ಥಿತಿ ಹೀಗಾದರೆ ಸಾಮಾನ್ಯ ಜನರ ಪಾಡೇನು ಎನ್ನುವಂತಹ ವಾತಾವರಣ ಸೃಷ್ಟಿಸಿದ ರಾಮನಗರ ಪೊಲೀಸರ ವಿರುದ್ಧ ಕಠಿಣವಾದ ಕ್ರಮ ಜರುಗಿಸಬೇಕೆಂದು ಮತ್ತು ಈಗಾಗಲೇ ವಕೀಲರ ಮೇಲೆ ದಾಖಲಿಸಿದಂತಹ ಸುಳ್ಳು ಪ್ರಕರಣವನ್ನು ಕೈ ಬಿಡಬೇಕೆಂದು ಅಧ್ಯಕ್ಷರು ಆಗ್ರಹಿಸಿದರು.

ಮುಖ್ಯಮಂತ್ರಿ ಅವರಿಗೆ ಬರೆದ ಮನವಿ ಪತ್ರವನ್ನು ತಹಸೀಲ್ದಾರ್ ಶ್ರುತಿ ಎಂ.ಎಂ ಅವರಿಗೆ ಸಲ್ಲಿಸಲಾಯಿತು. ಈ ಪ್ರತಿಭಟನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಶ್ರೀನಿವಾಸಮೂರ್ತಿ, ಉಪಾಧ್ಯಕ್ಷ ಎಚ್.ಎಂ.ಮಂಜುನಾಥಸ್ವಾಮಿ, ಜಂಟಿ ಕಾರ್ಯದರ್ಶಿ ವಿ.ರವಿಕುಮಾರ, ಖಜಾಂಚಿ ಎ.ಮರಿಯಪ್ಪ, ಹಿರಿಯ ವಕೀಲರಾದ ಎಸ್.ವಿ.ಜವಳಿ, ಡಿ.ರವಿರಾಜ್. ಜಿ.ವೀರಭದ್ರಪ್ಪ, ಜೆ.ಪ್ರಹ್ಲಾದ್ ಶೆಟ್ಟಿ, ಎ.ಕರುಣಾನಿಧಿ, ಬಳ್ಳಾರಿಯ ಜಿ.ಬಸವರಾಜ್, ಐ.ಪರಶುರಾಮ, ಬಿ.ಸಿ.ಮಹಾಂತೇಶ, ನೋಟರಿಗಳಾದ ಚಂದ್ರಶೇಖರ ವಿ.ಯಲಗೊಡು, ತಾರಿಹಳ್ಳಿ ಹನುಮಂತಪ್ಪ, ಸುರುಭಿದುರ್ಗಾ, ವಕೀಲರಾದ ಕೆ.ರಾಮಪ್ಪ, ಇ.ಪುಷ್ಪಲತಾ, ಕೆ.ಶರಣಪ್ಪ, ಗೋಪಿ, ಸುಮಂಗಲಾ, ಮೌಲಾ, ರಾಜೇಂದ್ರ ಪ್ರಸಾದ್, ಉಮೇಶ.ಎ, ದುರುಗಪ್ಪ, ವಿಜಯಕುಮಾರ, ಅಜರುದ್ದೀನ್, ಜಿ.ವಿಶ್ವನಾಥ್, ರಮೇಶ ಹೂಗಾರ್, ಪಾಂಡುರಂಗ, ಮಂಜುನಾಥ, ದುರ್ಗೇಶ್‌ಕುಮಾರ, ರಾಜೇಶ್, ಎನ್. ಎಂ.ಸೌದಾಗರ್ ಮತ್ತಿತರರು ಇದ್ದರು.

## ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

2023-24ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳ ( ವೃತ್ತಿಪರ ಪದವಿ ಮತ್ತು ಸ್ನಾತಕೊತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕೆ ಅರ್ಜಿ ಅಹ್ವಾನಿಸಲಾಗಿದೆ.

ವೃತ್ತಿಪರ ಮತ್ತು ಸ್ನಾತಕೊತ್ತರ ಕೋರ್ಸಿನ ವಿದ್ಯಾರ್ಥಿಗಳಿಗೆ ಕೌನ್ಸಲಿಂಗ್ ತಡವಾಗಿದ್ದರಿಂದ ಕಾಲೇಜುಗಳು ತಡವಾಗಿ ಪ್ರಾರಂಭಿಸಲಾಗಿದ್ದು ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗಿರುವುದಿಲ್ಲವೆಂದು ಅರ್ಜಿ ಸಲ್ಲಿಸಲು ಮತ್ತೆ ಅವಕಾಶ ಕಲ್ಪಿಸಲಾಗಿದೆ. ಮೆಟ್ರಿಕ್ ನಂತರ ವೃತ್ತಿಪರ ಮತ್ತು ಸ್ನಾತಕೋತ್ತರ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಸ್ಥಾನಗಳು ಉಳಿದಿದ್ದು ಹೊಸದಾಗಿ ಪ್ರವೇಶ ಬಯಸುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ವೃತ್ತಿಪರ ಪದವಿ, ಸ್ನಾತಕೊತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳು ಮಾತ್ರ ಪ್ರವೇಶಾತಿ ಕಲ್ಪಿಸಲು ತಾಲೂಕು ಕಲ್ಯಾಣ ಅಧಿಕಾರಿಗಳ ಎಸ್.ಎಚ್.ಪಿ ಲಾಗಿನ್‌ನಲ್ಲಿ ಫೆ. 20 ರಿಂದ 29ರವರೆಗೆ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಉಳಿದಿರುವ ಸ್ಥಾನಗಳಿಗೆ ತಾಲ್ಲೂಕ ಹಂತದಲ್ಲಿ ವಿದ್ಯಾರ್ಥಿಗಳಿಂದ ದಾಖಲಾತಿಗಳನ್ನು ಪಡೆದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯವು ಪ್ರವರ್ಗ-1 ಎಸ್.ಸಿ & ಎಸ್.ಟಿ 2.50 ಲಕ್ಷ, ಮತ್ತು ಪ್ರವರ್ಗ-2ಎ, 2ಬಿ. 3ಎ, 3ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರೆ 1.00 ಲಕ್ಷ ಮಿತಿಯಲ್ಲಿರಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚುನಾವಣಾ ಕರ್ತವ್ಯ ಅಚ್ಚುಕಟ್ಟಾಗಿ ನಿರ್ವಹಿಸಿ

**ಮೊದಲ ಪುಟದಿಂದ**

ಚೆಕ್‌ಪೋಸ್ಟ್ ಹಾಕಲು ಕ್ರಮ ವಹಿಸಲಾಗುವುದು. ಯಾವುದೇ ಅಹಿತಕರ ಘಟನೆಗಳು ಕಂಡುಬಂದಲ್ಲಿ ಮಾಹಿತಿ ನೀಡಲಾಗುವುದು ಎಂದು ಜಿಲ್ಲಾಧಿಕಾರಿಯವರಿಗೆ ತಿಳಿಸಿದರು.

ಆದಾಯ ತೆರಿಗೆ ಇಲಾಖೆ ಅಧಿಕಾರಿ ನಿಶಾಂತ್ ಅವರು ಮಾತನಾಡಿ, ಚುನಾವಣೆ ಸಂದರ್ಭದಲ್ಲಿ ಎಂಸಿಸಿ ಅಥವಾ ಇತರೆ ತಂಡವು ಕೈಗೊಳ್ಳುವ ಕಾರ್ಯಾಚರಣೆಯಲ್ಲಿ ಹೆಚ್ಚಿನ ಮೊತ್ತದ ಹಣ ಸೀಜ್ ಮಾಡಿದ ಕೂಡಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ಗಮನಕ್ಕೆ ತರಬೇಕು, ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಯಾವುದೇ ಸಮಯದಲ್ಲಿ ಯಾವುದೇ ಸ್ಥಳದಲ್ಲಿ ದಾಳಿ ನಡೆಸಿ, ತನಿಖೆ ತಡೆಸುವ ಅಧಿಕಾರಿ ಹೊಂದಿದೆ. ಹೀಗಾಗಿ ಚುನಾವಣೆ ಸಂದರ್ಭದಲ್ಲಿ ಅಧಿಕಾರಿಗಳು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳೊಂದಿಗೆ ಸಮನ್ವಯ ಮಾಡಬೇಕು ಎಂದರು. ಸಭೆಯಲ್ಲಿ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರೂ ಆದ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್, ಸಹಾಯಕ ಆಯುಕ್ತ ಹೇಮಂತ್.ಎನ್ ಸೇರಿದಂತೆ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿದ ನೋಡೆಲ್ ಅಧಿಕಾರಿಗಳು ಇತರರು ಉಪಸ್ಥಿತರಿದ್ದರು.






## ಕತ್ತಲೆಯಿಂದ ಬೆಳಕಿನೆಡೆಗೆ: ಜಾಗೃತಿ ಜಾಥಾ

■ ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಹೊಸಪೇಟೆಯಲ್ಲಿ "ಸಂವಿಧಾನ ಜಾಗೃತಿ ನಡಿಗೆ – ಕತ್ತಲೆಯಿಂದ ಬೆಳಕಿನಡೆಗೆ" ಶೀರ್ಷಿಕೆಯಡಿ ಫೆ.20 ರಂದು ವಿಶೇಷ ಜಾಥಾ ನಡೆಯಿತು.

ವಿಜಯನಗರ ಜಿಲ್ಲಾ ಕೇಂದ್ರದ ಪುನೀತ್ ರಾಜ್‌ಕುಮಾರ್ ವೃತ್ತದಿಂದ ಅಂಬೇಡ್ಕರ್ ವೃತ್ತದವರೆಗೆ ಹಮ್ಮಿಕೊಂಡಿದ್ದ ಸಂವಿಧಾನ ಜಾಗೃತಿ ಜಾಥಾಕ್ಕೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ಎಸ್. ಅವರು ಚಾಲನೆ ನೀಡಿದರು. ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಸಂವಿಧಾನದ ಪೀಠಿಕೆಯನ್ನು ಬೋಧಿಸಲಾಯಿತು. ಮಾನವ ಸರಪಳಿ ರಚನೆ, ಪಂಜಿನ ಕವಾಯತ, ಮೇಣದ ಭತ್ತಿ ಬೆಳಗಿಸುವುದರ ಮೂಲಕ ಡಾ.ಅಂಬೇಡ್ಕರ್‌ರವರಿಗೆ ನಮನ ಸಲ್ಲಿಸಲಾಯಿತು.





ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಶು ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು, ಪೌರಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಸಮಾಜ ಕಲ್ಯಾಣ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗ ಮತ್ತು ವಸತಿ ನಿಲಯದ ವಿದ್ಯಾರ್ಥಿಗಳು, ವಿವಿಧ ಸಂಘಟನೆಯ ಮುಖಂಡರು ಭಾಗವಹಿಸಿದ್ದರು. ವಸತಿ ನಿಲಯದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

## ಸರ್ಕಾರ ಯೋಜನೆಗಳ ಜಾಗೃತಿಗೆ ಗ್ರಾಮಗಳಲ್ಲಿ ಬೀದಿನಾಟಕ



■ ಹಂಪಿ ಟೈಮ್ಸ್ ಹೊಸಪೇಟೆ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಗ್ರಾಮ ಸಂಪರ್ಕ ಯೋಜನೆಯಡಿ ಹೂವಿನಹಡಗಲಿ ತಾಲೂಕಿನ ಹ್ಯಾರಡ ಗ್ರಾಮದ ಜನನಿ ಪುಷ್ಪಕಲಾ ಯುವಕ ಸಂಘದ ಕಲಾ ತಂಡದವರು ಫೆ.21 ರಂದು ಹೂವಿನಹಡಗಲಿ ತಾಲೂಕಿನ ಕೊಂಬಳಿ ಮತ್ತು ಮುದ್ಲಗಟ್ಟೆ ಗ್ರಾಮಗಳಲ್ಲಿ ಮತ್ತು ಫೆ.22ರಂದು ಕಾಂತೇಬೆನ್ನೂರ ಮತ್ತು ಮೈಲಾರದಲ್ಲಿ ಬೀದಿನಾಟಕ ಪ್ರದರ್ಶಿಸಿ ಸರ್ಕಾರದ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಿದರು.

ಸಂಘದ ಟಿ.ಚಮನ್ ಸಾಹೇಬ್, ಎಂ ಮಂಜುನಾಥ್, ಎಸ್ ಕೃಷ್ಣಪ್ಪ ಗೋವಿಂದ, ಹನುಮಯ್ಯ, ಹೊಸಂತ ಕುಮರಿ, ಮಮತ ಕೆ.ಎಸ್, ರವಿಕುಮಾರ್, ಮಹಾಂತೇಶ, ಸೇರಿ ಇತರರು ನಾಟಕ ಪ್ರದರ್ಶಿಸಿ, ಗ್ರಾಮದಲ್ಲಿ ಸಂಚರಿಸಿ, ತಮಟೆ ಬಾರಿಸಿ, ಹಾಡು ಹೇಳಿ ಸರ್ಕಾರದ ಗ್ಯಾರಂಟಿ ಯೋಜನೆಗಳು, ಶುಚಿತ್ವ ನೀರಿನ ಮಿತ ಬಳಕೆ ಬಗ್ಗೆ ಜಾಗೃತಿ ಮೂಡಿಸಿದರು.

• Admissions
• Requirements
• Firm Branding
• Public Notice
• Change of Name

BOOK NOW!

Booking Open for Your Advertisements in Leading Local, State & National News Papers
9482599089 / 9448633038

• Obituary
• Remembrance
• Birthday wish ads
• Events Display &
• Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA